ತೆಗೆದುಕೊಳ್ಳಿ, ಕೆಟ್ಟದ್ದು ಇದ್ದರೆ ಬಿಟ್ಟು ಬಿಡಿ, ನಾನು ಬೇಡವೆಂದು ಹೇಳುವುದಿಲ್ಲ. ಈ ವಿಚಾರವನ್ನು ಇಟ್ಟು ನಾನು ಹೇಳುತ್ತಿದ್ದೇನೆ. ನಾನು ಕೊಟ್ಟಿರತಕ್ಕ ಸಲಹೆಗಳು ಉಪಯುಕ್ತವಾಗಿರತಕ್ಕ ಸಲಹೆಗಳು. ನಮ್ಮ ಕಾಲದಲ್ಲಿ ಮಾಡಿರತಕ್ಕ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನಿಮ್ಮ ಮನಸ್ಸಿಗೆ ಹಿಡಿಸಿದರೆ ಮುಂದುವರೆಸಿ, ಇಲ್ಲ ಅದಕ್ಕಿಂತ ಒಳ್ಳೊಳ್ಳೆಯ ಕಾರ್ಯಕ್ರಮಗಳು ನಮ್ಮ ಹತ್ತಿರ ಇವೆ ಅಂದರೆ I don't mind taking them up and move forward. ಇಡೀ ರಾಜ್ಯದ ಸರ್ವಾಂಗೀಣ ಪ್ರಗತಿಯ ಬಗ್ಗೆ ನಾವು ಬಜೆಟ್ ಇಟ್ಟಿದ್ದೇವೆ ಎನ್ನುವ ಮಾತನ್ನು ಆಡಿದರೆ, ಪ್ಲಾನ್ ಮತ್ತು ನಾನ್‌ಪ್ಲಾನ್ ನಾನು ನೋಡಿದ್ದೇನೆ. ಬಡಬಗ್ಗರ ಬಗ್ಗೆ ನೀವು ಯಾವ ಕಾರ್ಯಕ್ರಮಗಳನ್ನು ಕೂಡ ಹಾಕಲಿಲ್ಲ. ಯುವ ಜನರ ಬಗ್ಗೆ ನೀವು ಯಾವುದೇ ಕಾರ್ಯಕ್ರಮವನ್ನು ಹಾಕಿಲ್ಲ. ಮೈನಾರಿಟಿ ಮತ್ತು ಷೆಡ್ಯೂಲ್ಡ್ ಕಾಸ್ಟ್ ಷೆಡ್ಯೂಲ್ಡ್ ಟ್ರೈಬ್ ಮತ್ತು ಎಲ್ಲಾ ಜಾತಿಯ ಬಗ್ಗೆ ಕಾರ್ಯಕ್ರಮಗಳನ್ನು ಹಾಕದೆ ಸಪರೇಟ್ ಬಜೆಟ್ ಅಲೋಕೇಷನ್ ಅದು ಏನೂ ಇಲ್ಲದೆ ಬರೀ ಭಾಷಣ ಮಾಡಿದರೆ ನಾನು ಅನಿವಾರ್ಯದಿಂದ ಹೇಳಬೇಕಾಗಿದೆ the entire budget is based on your political mockings... ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ನೀವು ಬಜೆಟ್ ಇಟ್ಟಿದ್ದೀರಿ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಮಾತನಾಡಿದ್ದೇನೆ. ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಇರಿಗೇಷನ್ ಪವರ್ ಇತ್ಯಾದಿ ಎಲ್ಲಾ ಕೋರ್ ಸೆಕ್ಟಾರ್ ಕೂಡ ಗಮನದಲ್ಲಿಟ್ಟು ಇಷ್ಟು ಮಾತನ್ನು ಹೇಳಿ, ಕ್ಷಮಿಸಬೇಕು ಸಭಾಧ್ಯಕ್ಷರೇ ಹಲವಾರು ಸೂಚನೆಗಳನ್ನು ವಿಚಾರಗಳನ್ನು ಅಂಕಿ ಅಂಶಗಳ ಸಹಿತ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಮತ್ತು ಸಭೆಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಖಾಸಗೀ ಬಸ್ ಮಾಲೀಕರ ಮುಷ್ಕರಕ್ಕೆ ಮಂತ್ರಿಗಳ ಹೇಳಿಕೆಗೆ ಒತ್ತಾಯ :-

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸು ಮಂತ್ರಿಗಳು 3 ಗಂಟೆಗೆ ಖಾಸಗೀ ಬಸ್ ಮಾಲೀಕರು ಮುಷ್ಕರ ಮಾಡಿರುವ ಬಗ್ಗೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ. ಅವರ ಇನ್ನೂ ಹೇಳಿಕೆಯನ್ನು ಕೊಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಹಳ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಸಗೀ ಬಸ್‌ಗಳ ಮಾಲೀಕರು ಮುಷ್ಕರ ಮಾಡಿರುವುದರಿಂದ ರಾಜ್ಯದಲ್ಲಿ ಬಹಳ ತೊಂದರೆಯಾಗಿದೆ. ಸಾವಿರಾರು ಬಸ್‌ಗಳನ್ನು ನೇಮಕ ಮಾಡಿದ್ದೇವೆಂದು ಹೇಳಿದರು. ಸಾವಿರ ಬಸ್ಸುಗಳು ಬೀದಿಯಲ್ಲಿ ಇಲ್ಲದೆ ಜನ ಅಲ್ಲಲ್ಲೇ ತೊಂದರೆಗೆ ಸಿಕ್ಕಿದ್ದಾರೆ. ಮಾನ್ಯ ಹಣಕಾಸು ಸಚಿವರಿಗೆ ಯಾರು ಹೇಳಿದರೋ

ಗೊತ್ತಿಲ್ಲ ಅವರು ಯಾರನ್ನು ಕೇಳಿದರೋ ಗೊತ್ತಿಲ್ಲ. ಅವರು ಯಾವ ರೀತಿಯ ಹೇಳಿಕೆಯನ್ನು ಕೊಡುತ್ತಾರೋ ಅದನ್ನು ಇನ್ನು ಕೊಟ್ಟಿಲ್ಲ. ನಾನು ಹೊರಗಡೆ ತಿಳಿದ ಪ್ರಕಾರ ಬಸ್ಸುಗಳನ್ನು ಎಲ್ಲೆಲ್ಲಿ ಕೊಟ್ಟಿದ್ದಾರೆ ಎಲ್ಲೆಲ್ಲಿ ಬಿಟ್ಟಿದ್ದಾರೆ ಅದು ಗೊತ್ತಿಲ್ಲ. ಪ್ರಾಮಾಣಿಕವಾಗಿ ಹೇಳುತ್ತೇನೆ, ಸಾವಿರಾರು ಬಸ್ಸುಗಳನ್ನು ಸರ್ಕಾರ ಬಿಟ್ಟಿಲ್ಲ. ಜನಜಂಗುಳಿ ಇದೆ, ಎಲ್ಲಿ ನೋಡಿದರೂ ಜನಜಂಗುಳಿ ಇದೆ. ಅದು ಇದೇ ರೀತಿ ಮುಂದುವರೆದರೆ ರಾಜ್ಯದ ಜನ ಬಹಳ ಅತ್ಯಂತ ತೊಂದರೆಗೆ ಸಿಕ್ಕಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ರಾಜ್ಯದಲ್ಲಿ ಗಂಭೀರವಾದ ಪರಸ್ಥಿತಿ ನಿರ್ಮಾಣವಾಗುತ್ತದೆ. ತಮ್ಮಲ್ಲಿ ಮನವಿ ಏನೆಂದರೆ ಮಾನ್ಯ ಹಣಕಾಸಿನ ಸಚಿವರು ಕೂಡಲೇ ಅವರನ್ನೆಲ್ಲಾ ಕರೆದು ಇವತ್ತು ರಾತ್ರಿಯೇ ಕರೆದು ಮಾತುಕತೆ ಆಡಿ ಒಂದು ಇತ್ಯರ್ಥಕ್ಕೆ ಬರಬೇಕು. ಬರಲಿಲ್ಲವೆಂದರೆ ಯಾರದೋ ಮೇಲಿನ ಕೋಪಕ್ಕೆ ಇಡೀ ರಾಜ್ಯದ ಜನತೆಯನ್ನು ತೊಂದರೆಗೆ ಸಿಕ್ಕಿಸಿದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಸರ್ಕಾರದವರು ಎಚ್ಚರಿಕೆಯಿಂದ ಈ ಬಗ್ಗೆ ಕಾರ್ಯಪ್ರವೃತ್ತರಾಗಬೇಕೆಂದು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಸುಬ್ಬರಾಯ ಮಾರಪ್ಪ ದ್ಯಾಮಕೋಡಿ :- ಮಾನ್ಯ ಉಪಾಧ್ಯಕ್ಷರೆ, ಕೊಡಗಿಗೆ ಬರೀ 25 ಬಸ್ಸುಗಳನ್ನು ಹಾಕಿದ್ದೇವೆಂದು ಹೇಳಿದ್ದಾರೆ. ನಾನು ದೂರವಾಣಿ ಮೂಲಕ ವಿಚಾರಿಸಿದಾಗ ಸಾವಿರಾರು ಜನ ನೂರಾರು ಮೈಲಿ ಓಡಾಡಬೇಕು. ಹಳ್ಳಿಗಳಿಂದ ಕೂಡಿರತಕ್ಕ ಕೊಡಗು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ಖಾಸಗಿ ಬಸ್ಸುಗಳನ್ನು ಅವಲಂಬಿಸಿಕೊಂಡಿದ್ದರು. ಬಹಳಷ್ಟು ಜನ ಬಹಳಷ್ಟು ಓಡಾಡುತ್ತಿದ್ದಾರೆ. ಬಹಳಷ್ಟು ಜನ ನಡೆದುಕೊಂಡು ಹೋಗೆಲಿಕ್ಕೆ ಕಷ್ಟಪಟ್ಟುಕೊಂಡು ಮತ್ತೆ ಯಥಾ ಪ್ರಕಾರ ಇಲ್ಲೆಲ್ಲಿ ಏನೇನು ಸಿಗುತ್ತದೋ ಅದರಲ್ಲಿ ಹೋಗಲಿಕ್ಕೆ ಅವ್ಯವಸ್ಥೆಯಿಂದ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಈ ರೀತಿ ಇರುವಾಗ ಸರ್ಕಾರಿ ವ್ಯವಸ್ಥೆಯೆಂದು ತಿಳಿದುಕೊಳ್ಳದೆ ಖಾಸಗಿ ಬಸ್ ಮಾಲೀಕರನ್ನು ಕರೆದು ಸಂಧಾನ ಮಾಡಿ ಒಂದು ರೀತಿಯ ನಿರ್ಧಾರ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :- ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಎಷ್ಟು ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ವಿಶೇಷವಾಗಿ ನನ್ನ ಕ್ಷೇತ್ರ ತೀರ್ಥಹಳ್ಳಿಗೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಹಾಕಿಲ್ಲ. ನಾನು ದೂರವಾಣಿಯ ಮೂಲಕ ಈಗ ಮಾತನಾಡಿದೆ, ಸಾರಿಗೆ ಸಂಸ್ಥೆಯ ಒಂದು ಬಸ್ ಸಹ ಓಡಾಡುತ್ತಿಲ್ಲ. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಬಸ್ಸಿನಲ್ಲಿಯೇ ಪ್ರಯಾಣ ಮಾಡಬೇಕಾಗುತ್ತದೆ. ಒಂದು ಬಸ್ ಸಹ ಹಾಕಿಲ್ಲ, ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗುತ್ತಿಲ್ಲ. ರೋಗಿಗಳು ಆಸ್ಪತ್ರೆಗೆ ಬರಲಿಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲಾ ಕಡೆ

ದಯನೀಯವಾದ ಪರಿಸ್ಥಿತಿಯಿದೆ. ದಯಮಾಡಿ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಖಾಸಗಿ ಬಸ್ ಮಾಲೀಕರ ಜೊತೆಯಲ್ಲಿ ಮಾತನಾಡಿ ಬಸ್‌ಗಳು ಓಡಾಡುವಂತೆ ಮಾಡಬೇಕು. ಇಲ್ಲದಿದ್ದರೆ ನನ್ನ ಕ್ಷೇತ್ರಕ್ಕೆ ಸಾಕಷ್ಟು ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಬಿಡುಗಡೆ ಮಾಡಲಿಕ್ಕೆ ಇವತ್ತೆ ಪ್ರಯತ್ನ ಮಾಡಬೇಕು.

ಉಪಾಧ್ಯಕ್ಷರು :- ಮಾನ್ಯ ಮಂತ್ರಿಗಳು ಹೇಳಿಕೆ ಕೊಡಲಿ.

ಮಂತ್ರಿಗಳ ಹೇಳಿಕೆ

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು) :- ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಹೇಳಿಕೆಯನ್ನು ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ :-

ಖಾಸಗಿ ಬಸ್ಸು ಮಾಲೀಕರುಗಳು ವೃತ್ತಪತ್ರಿಕೆಗಳ ಮೂಲಕ ಮುಷ್ಕರಕ್ಕೆ ದಿನಾಂಕ: 27-3-1995ರಂದು ಕರೆ ಕೊಟ್ಟಿದ್ದು ದಿನಾಂಕ 28-3-95 ರಂದು ಬಸ್ಸುಗಳ ಓಡಾಟವನ್ನು ತೆರಿಗೆ ಹೆಚ್ಚಿಸಿರುವ ವಿರುದ್ಧ ನಿಲ್ಲಿಸುವುದಾಗಿ ತಿಳಿಸಿದರು. ಈ ಬಗ್ಗೆ ಸರ್ಕಾರಕ್ಕೆ ಯಾವುದೇ ವಿಧವಾದ ಸೂಚನೆಯನ್ನು ನೀಡಿರುವುದಿಲ್ಲ. 1995-96ರ ಆಯವ್ಯಯದಲ್ಲಿ ಖಾಸಗಿ ವಾಹನಗಳ ಪ್ರತಿ ಆಸನ ಒಂದಕ್ಕೆ ಮೂರು ತಿಂಗಳಿಗೊಮ್ಮೆ ಕೊಡಬೇಕಾದ ತೆರಿಗೆಯನ್ನು 400ರಿಂದ 450ಕ್ಕೆ ಏರಿಸಲಾಗಿದೆ. ಹೆಚ್ಚಿಸಿರುವ ತೆರಿಗೆ ಪ್ರಸ್ತಾಪವು ನಮ್ಮ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳಗಳಿಲ್ಲ ವಿಧಿಸಿರುವ ತೆರಿಗೆಗೆ ಸಮಾನವಾಗಿದೆ. ಇದು ಆದ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು ಗೃಹ ಸಚಿವರು ಹಣಕಾಸು ಸಚಿವರು ಮತ್ತು ಸಾರಿಗೆ ಸಚಿವರು ಇನ್ನಿತರ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಪರಿಸ್ಥಿತಿ ಬಗ್ಗೆ ಚರ್ಚಿಸಿ ಸೂಕ್ತ ಬದಲಿ ವ್ಯವಸ್ಥೆ ಮಾಡುವಂತೆ, ಅಲ್ಲಿ ಮುಷ್ಕರದಿಂದ ಉಂಟಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು ಆದೇಶ ನೀಡಿರುತ್ತಾರೆ. ಸರ್ಕಾರದ ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಖುದ್ದಾಗಿ ಮೈಸೂರು, ಮಂಡ್ಯ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಬದಲಿ ವ್ಯವಸ್ಥೆ ಮಾಡುವಂತೆಯೂ ಮತ್ತು ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ಎದುರಿಸುವಂತೆ ಸೂಚನೆ ನೀಡಿರುತ್ತಾರೆ. ಮಾನ್ಯ ಸಾರಿಗೆ ಸಚಿವರು ಪತ್ರಿಕೆಗಳ ಮುಖಾಂತರ ಸಾರ್ವಜನಿಕರಿಗೆ ಉಂಟಾಗಿದ್ದ ಪರಿಸ್ಥಿತಿಯನ್ನು ನಿಭಾಯಿಸಲು ತಕ್ಕ ವ್ಯವಸ್ಥೆ ಮಾಡಿರುತ್ತಾರೆ. ಅತಿ ಅಗತ್ಯವಾದ ಮಾರ್ಗಗಳನ್ನು ನಿಭಾಯಿಸಲು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯವರು ಸಾವಿರ ಬಸ್ಸುಗಳನ್ನು ಓಡಿಸಲು ಈ ಮೇಲ್ಕಂಡ ಜಿಲ್ಲೆಗಳಲ್ಲಿ ಏರ್ಪಾಡು ಮಾಡಿರುತ್ತಾರೆ. ಇದರ ಜೊತೆಗೆ ಉಳಿದ ಎಲ್ಲಾ

ಸಾರಿಗೆ ವಾಹನಗಳನ್ನು ಅಂದರೆ ಮ್ಯಾಕ್ಸಿ ಕ್ಯಾಬ್ ಮತ್ತು ಲಘು ವಾಹನಗಳನ್ನು ಅನಿರ್ಬಂಧವಾಗಿ ಓಡಿಸಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಅವಶ್ಯಕತೆಗೆ ವಿಶೇಷ ಗಮನ ಕೊಡಲಾಗಿದೆ. ಈ ದಿನ ಅಪರಾಹ್ನ 1 ಗಂಟೆಯವರೆಗೆ ಈ ಮೇಲ್ಕಂಡ ಜಿಲ್ಲೆಗಳಲ್ಲಿ ಪರಿಸ್ಥಿತಿ ಶಾಂತವಾಗಿದೆ. ಯಾವುದೇ ವಿಧವಾದ ಅಹಿತಕರ ಘಟನೆಗಳು ವರದಿಯಾಗಿಲ್ಲ. ಖಾಸಗಿ ವಾಹನಗಳು ಓಡಾಟವನ್ನು ನಿಲ್ಲಿಸಿವೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯವರು ಬಸ್ಸುಗಳನ್ನು ಅವಶ್ಯಕತೆ ಕಂಡ ಮಾರ್ಗಗಳಲ್ಲಿ ಓಡಿಸುತ್ತಿದ್ದಾರೆ. ಮತ್ತೆ ಈಗ ಪ್ರತಿ ಜಿಲ್ಲೆಗಳಿಗೂ ಕೂಡ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆ, ಮಂಡ್ಯ, ಕೊಡಗು, ಮೈಸೂರು, ಚಿಕ್ಕಮಂಗಳೂರು, ಮತ್ತು ಬೆಂಗಳೂರು ವಿಭಾಗದಲ್ಲಿ ಕೂಡ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಮೊದಲಿನಿಂದಲೂ ಓಡಾಡುತ್ತಿವೆ. ಪೂರಾ ಮನಾಪಲ ಆಗಿಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಕೂಡ ಕೆಲವು ಭಾಗಗಳಲ್ಲಿ ಓಡುತ್ತಿವೆ. ಸಾರ್ವಜನಿಕರಿಗೆ ತೊಂದರೆಯಾಗಬಾರದು, ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದು ಹೇಳಿ ಕೆ.ಎಸ್.ಆರ್.ಟಿ.ಸಿ.ಯಿಂದ ಒಂದು ಸಾವಿರ ಬಸ್ಸುಗಳನ್ನು ತಂದು ಈಗಾಗಲೇ ತುಮಕೂರಿಗೆ 100 ಬಸ್ಸುಗಳನ್ನು ಕೊಟ್ಟಿದ್ದೇವೆ. ಚಿತ್ರದುರ್ಗಕ್ಕೆ 150 ಬಸ್ಸುಗಳನ್ನು ಕೊಟ್ಟಿದ್ದು, ಅವುಗಳಲ್ಲಿ 140 ಬಸ್ಸುಗಳು ಓಡುತ್ತಿವೆ. ಶಿವಮೊಗಕ್ಕೆ 150 ಬಸ್ಸುಗಳನ್ನು ಕೊಟ್ಟಿದ್ದು ಅವುಗಳಲ್ಲಿ 140 ಬಸ್ಸುಗಳು ಈಗ ಓಡಾಡುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 75 ಬಸ್ಸುಗಳು ಓಡಾಡುತ್ತಿವೆ. ಅಲ್ಲಿ ನಗರ ಪ್ರದೇಶದಲ್ಲಿ ಏನು ಖಾಸಗಿ ಬಸ್ಸುಗಳು ಓಡಾಡುತ್ತಿವೆ, ಅವುಗಳನ್ನು ನಿಲ್ಲಿಸಿಲ್ಲ. ಮಂಡ್ಯದಲ್ಲಿ 100 ಬಸ್ಸುಗಳನ್ನು ಕೊಟ್ಟಿದ್ದು 118 ಬಸ್ಸುಗಳು ಅಲ್ಲಿ ಓಡಾಡುತ್ತಿವೆ. ಕೊಡಗು ಜಿಲ್ಲೆಗೆ 30 ಬಸ್ಸುಗಳನ್ನು ಕೊಟ್ಟುದ್ದು 30 ಬಸ್ಸುಗಳು ಓಡಾಡುತ್ತಿವೆ. ಮೈಸೂರಿಗೆ 75 ಬಸ್ಸುಗಳನ್ನು ಕೊಟ್ಟಿದ್ದೇವೆ. ಅದರಲ್ಲಿ 50 ಬಸ್ಸುಗಳು ಮೊದಲು ಕೊಟ್ಟಿದ್ದು, ನಂತರ 25 ಬಸ್ಸುಗಳನ್ನು ಮತ್ತೆ ಕೊಟ್ಟಿದ್ದೇವೆ. ಚಿಕ್ಕಮಗಳೂರಿನಲ್ಲಿ 25 ಬಸ್ಸುಗಳು, ಮತ್ತೆ 30 ಬಸ್ಸುಗಳು ಓಡಾಡುತ್ತಿವೆ. ರಾಮನಗರ ತಾಲ್ಲೂಕಿನಲ್ಲಿ 25, ಕನಕಪುರ ತಾಲ್ಲೂಕಿನಲ್ಲಿ 25, ಒಟ್ಟು 788 ಬಸ್ಸುಗಳನ್ನು ಓಡಿಸುವುದಕ್ಕೆ ಬಿಟ್ಟಿದ್ದೇವೆ. ಇನ್ನು 215 ಬಸ್ಸುಗಳು ರಿಸರ್ವ್‌ನಲ್ಲಿವೆ.

ಶ್ರೀ ಹೆಚ್.ಎನ್.ನಂಜೇಗೌಡ :- ಇವತ್ತು ಬಿಟ್ಟಿರುವುದು ಎಷ್ಟು ಎಂಬುದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ :- ಇವೆಲ್ಲವೂ ಕೂಡ ಹೊಸದಾಗಿ ಬಿಟ್ಟಿರುವುದು.

(ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ :- ನನಗೆ ಮಾನ್ಯ ಸಚಿವರ ಮೇಲೆ ಅಪಾರವಾದ ಗೌರವ ಇದೆ.

ಶ್ರೀ ಕೆ.ಎಸ್.ಈಶ್ವರಪ್ಪ :- ನೀವು ಬದಲಿ ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ ವಿನಹ, ಇದರಿಂದ ಸಾರ್ವಜನಿಕರಿಗೆ ಪ್ರಯೋಜನವಾಗಿಲ್ಲ. ರಾಜ್ಯದಲ್ಲಿ ಜನ ಸಾಯುತ್ತಿದ್ದಾರೆ. ಇಲ್ಲಿಯವರೆಗೂ ಅವರನ್ನು ಕರೆದು ಚರ್ಚೆ ಮಾಡುತ್ತೇವೆ ಎನ್ನುವುದರ ಬಗ್ಗೆ ಒಂದು ಪದ ಇಲ್ಲ. ಅದು ಬರೇ ಇಲ್ಲಿ 25 ಬಸ್ಸುಗಳನ್ನು ಕಳುಹಿಸಿದ್ದೇವೆ, ಅಲ್ಲಿ 50 ಬಸ್ಸುಗಳನ್ನು ಕಳುಹಿಸಿದ್ದೇವೆ ಎಂದರೆ ಈ ಬಸ್ಸುಗಳು ಎಲ್ಲಿಂದ ಉದ್ಭವಿಸಿಬಂದವು?

ಶ್ರೀ ಸಿದ್ಧರಾಮಯ್ಯ :- ಕೆ.ಎಸ್.ಆರ್.ಟಿ.ಸಿ.ಯಲ್ಲಿ ಯಾವಾಗಲೂ ರಿಸರ್ವ್ ಆಗಿ ಒಂದು ಸಾವಿರ ಬಸ್ಸುಗಳು ಇರುತ್ತವೆ. ಅಗತ್ಯ ಬಂದರೆ ಉಪಯೋಗಿಸಿಕೊಳ್ಳುವ ಸಲುವಾಗಿ ಮತ್ತು ಇರುವ ರಿಸರ್ವ್ಡ್ ಬಸ್ಸುಗಳು ಮತ್ತು ಬೇರೆ ವಿಭಾಗಗಳಿಂದ ಕೂಡ ತರಿಸಿಕೊಂಡು ಅಗತ್ಯವಾಗಿ ಇರತಕ್ಕಂಥ ತೊಂದರೆಯನ್ನು ಬಗೆಹರಿಸುವುದರ ಸಲುವಾಗಿ ಎಲ್ಲಾ ಕಡೆಗೂ ಬಸ್ಸುಗಳನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ :- ಮಾತುಕತೆಗೆ ಅವರನ್ನು ಕರೆಯಿರಿ.

ಶ್ರೀ ಸಿದ್ಧರಾಮಯ್ಯ :- ಅವರು ಏಕಾಏಕಿ ಮುಷ್ಕರವನ್ನು ಪ್ರಾರಂಭ ಮಾಡಿದ್ದಾರೆ. ಅವರು ಬಂದು ಮಾತನಾಡುವುದಕ್ಕೆ ಸರ್ಕಾರ ಯಾವತ್ತೂ ಕೂಡ ಮುಕ್ತ ಮನಸ್ಸಿನಿಂದ ಇದೆ. ಅವರು ಬಂದು ಮಾತನಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗಲೂ ಕೂಡ ನಾನು ಈ ಸದನದ ಮೂಲಕ, ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತಿದ್ದೇನೆ. ಖಾಸಗಿ ಬಸ್ಸು ಮಾಲೀಕರು ಸರ್ಕಾರದ ಜೊತೆಗೆ ಬಂದು ಮಾತನಾಡಬಹುದು. ದಯಮಾಡಿ ಸಾರ್ವಜನಿಕರಿಗೆ ತೊಂದರೆಯಾಗಕೂಡದು. ಅವರು ಮುಷ್ಕರವನ್ನು ನಿಲ್ಲಿಸಿ ಸರ್ಕಾರದ ಜೊತೆಗೆ ಮಾತುಕತೆಗೆ ಬಂದು ಮಾತನಾಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ನಾನು ಪರಿಸ್ಥಿತಿಯನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಬೆಳಿಗ್ಗೆ 11 ಗಂಟೆಗೆಲ್ಲಾ ಅಡ್ಡಾದಿಡ್ಡಿಯಾಗಿ ಬಸ್ಸುಗಳನ್ನು ನಿಲ್ಲಿಸಿಬಿಟ್ಟಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ :- ಮಾನ್ಯ ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ನಮ್ಮ ರೂಲ್ಸ್ ಪ್ರಕಾರ ಈ ಸದನ ನಡೆಯಬೇಕು. ರೂಲ್ಸ್ ಬಿಟ್ಟು ಸದನ ನಡೆಸುವುದಕ್ಕೆ ಅವಕಾಶ ಆಗಬಾರದು ಎನ್ನುವುದು ಒಂದು. ಅವರು ಯಾವುದೇ ವಿಚಾರವನ್ನು ಎತ್ತಬಾರದು ಎಂದು ನಾನು ಹೇಳುವುದಿಲ್ಲ. ರೂಲ್ಸ್ ಒಳಗಡೆ ಅಂತಹ ಯಾವುದಾದರೂ ತುರ್ತು ಸಂದರ್ಭ ಬಂದಾಗ, ತಾವು ಅನುಮತಿಯನ್ನು ಕೊಟ್ಟು ಅವರು ರೈಸ್ ಮಾಡಿದಾಗ ಮಂತ್ರಿಗಳು ಸರ್ಕಾರದ ಪರವಾಗಿ ಒಮ್ಮೆ ಸ್ಟೇಟ್‌ಮೆಂಟನ್ನು ಮಾಡಿದ ಮೇಲೆ ಅದರ ಬಗ್ಗೆ ಕ್ಲಾರಿಫಿಕೇಷನ್ಸ್‌ಗೆ ಅವಕಾಶ ಇಲ್ಲ. ಬೇಕಾದರೆ ನಾಳೆ ಬೆಳಿಗ್ಗೆ ಅಥವಾ ಸಾಯಂಕಾಲ ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅವರು ನೋಟೀಸ್ ಕೊಟ್ಟ ನಂತರ ಏನು ಬೇಕಾದರೂ ಮಾಡಬಹುದು.

(ಸಭೆಯಲ್ಲಿ ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರದ ಈ ಧೋರಣೆ ಸರಿಯಾದುದಲ್ಲ. ಈಗಾಗಲೇ ಸರ್ಕಾರ ಅವರನ್ನೆಲ್ಲಾ ಕರೆದು ಮಾತನಾಡಿ ಅವರು ಸತ್ಯಾಗ್ರಹ ಮಾಡದೇ ಇರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಬಹುದಿತ್ತು. ಆದರೆ ಇದರ ಬಗ್ಗೆ ಸರ್ಕಾರಕ್ಕೆ ಮುಕ್ತ ಮನಸ್ಸಿಲ್ಲವೆಂದು ನನಗೆ ಅನ್ನಿಸುತ್ತದೆ. ಮಾನ್ಯ ಹಣಕಾಸಿನ ಸಚಿವರು ಅವರು ಬದಲಿ, ನಮ್ಮ ಜೊತೆಯಲ್ಲಿ ಮಾತನಾಡಲಿ ಎಂದರೆ, ಅದಲ್ಲ ಪ್ರಶ್ನೆ. ಸರ್ಕಾರ ನೇರವಾಗಿ ಅವರ ಪ್ರತಿನಿಧಿಗಳನ್ನು ಕರೆದು ಮಾತನಾಡಬೇಕು. ಇಂತಹ ಪರಿಸ್ಥಿತಿ ಬಂದಾಗ ಅನೇಕ ಸಾರಿ ಹಿಂದಿನ ಸರ್ಕಾರಗಳು ಮಾತುಕತೆಯಾಡತಕ್ಕಂಥ.....

ಶ್ರೀ ಕೆ.ಎನ್.ನಾಗೇಗೌಡ :- ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೇನೆ. ತಾವು ಅದರ ಬಗ್ಗೆ ರೂಲಿಂಗ್ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು :- ತಮ್ಮ ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾನ್ಯ ಮೊಯಿಲಿಯವರ ಸಲಹೆಯನ್ನು ಕೇಳೋಣ.

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಾಗೇಗೌಡರು ಏಕೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಎಂದು ನಮಗೆ ಗೊತ್ತಾಗುತ್ತದೆ. ನಾನು ಈ ವಿಷಯ ಬಹಳ ಪ್ರಮುಖವಾಗಿದೆ ಎಂದು ಯಾರ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ ಎಂದು ನನ್ನ ಭಾಷಣದ ಪ್ರಾರಂಭದಲ್ಲಿ ಹೇಳಿದೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕು. ಇದು ಬರೀ ಸೀಟಿನ ಪ್ರಶ್ನೆ ಅಲ್ಲ. ಕರ್ನಾಟಕ ಇತಿಹಾಸದಲ್ಲಿ ನಾನು ತಿಳಿದುಕೊಂಡಂತೆ ಲಾರಿ ಮಾಲೀಕರು ಸ್ಟ್ರೈಕ್ ಮಾಡತಕ್ಕಂಥ ಪರಿಸ್ಥಿತಿ ಇದ್ದರೂ ಕೂಡ ಬಸ್ಸು ಮಾಲೀಕರು ಸ್ಟ್ರೈಕ್ ಮಾಡಿದಂಥ ಇತಿಹಾಸ ಇಲ್ಲ. ಏಕೆಂದರೆ ಆಗಾಗ ಯಾವುದಾದರೂ ಬಲೋದ್ಬಂಧನ ಮಾಡಿಕೊಂಡು ಸ್ಟ್ರೈಕ್ ಮಾಡತಕ್ಕಂಥ ಪರಿಸ್ಥಿತಿ ಇದ್ದರೂ ಕೂಡ ಬಸ್ಸು ಮಾಲೀಕರು ಸ್ಟ್ರೈಕ್ ಮಾಡಿದಂಥ ಇತಿಹಾಸ ಇಲ್ಲ. ಅದಕ್ಕಾಗಿ ಇವತ್ತು ಅವರು ಸ್ಟ್ರೈಕ್ ಮಾಡಬೇಕಾದರೆ ನಾವು ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ಸಚಿವರಿಗೆ ಹೇಳಿಕೆ ಕೊಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅವರು ಹೇಳಿಕೆಯನ್ನು ಕೊಟ್ಟಾದ ಮೇಲೆ ಪ್ರಶ್ನೆಗಳು ಉದ್ಭವವಾದಾಗ ಇಲ್ಲಿ ಸ್ಪಷ್ಟೀಕರಣ ಕೇಳತಕ್ಕಂಥ ಶಾಸಕರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪಾಯಿಂಟ್ ಆಫ್ ಆರ್ಡರ್ ನಿಯಮದಲ್ಲಿ ಅದಕ್ಕೆ ಅವಕಾಶ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರಿಂದ ಸದಸ್ಯರಿಗೆ ಇರತಕ್ಕಂಥ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗುತ್ತದೆ. ಆದ್ದರಿಂದ ಈ ಪಾಯಿಂಟ್ ಆಫ್ ಆರ್ಡರ್‌ಗೆ ಬಹುಶಃ ಹೆಚ್ಚು ಮನ್ನಣೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ತಾವು ಅವರನ್ನು ಕರೆಯಿರಿ. ದಯವಿಟ್ಟು ಖಾಸಗಿ ಬಸ್ಸು ಮಾಲೀಕರನ್ನು ಮಾತುಕತೆಗೆ ಕರೆಯಿರಿ. ಏಕೆಂದರೆ ಅವರು ಕೂಡ ನಿಮ್ಮ ಹತ್ತಿರ, ಮುಖ್ಯಮಂತ್ರಿಗಳ ಹತ್ತಿರ ಭೇಟಿಯಾಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅವಕಾಶ ಸಿಗದೇ ಇರಬಹುದು. ಇದು ಜನರ ಪ್ರಶ್ನೆ ಇದೆ. ಪ್ರಯಾಣಿಕರ, ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪ್ರಶ್ನೆ ಇದೆ. ತಾವು ದಯವಿಟ್ಟು ಅವರನ್ನು ಬನ್ನಿ ಮಾತನಾಡೋಣ ಎಂದು ಸದನದ ಮೂಲಕ ಕೇಳಿಕೊಳ್ಳತಕ್ಕದ್ದು ಯೋಗ್ಯ ಅಲ್ಲ. ನೇರವಾಗಿ ಅವರ ಪ್ರತಿನಿಧಿಗಳನ್ನು ಕರೆದು ಅವರ ಜೊತೆಗೆ ಮಾತನಾಡಿ. ಚರ್ಚೆಗೆ ಬನ್ನಿ ಎಂದು ಅವರ ಜೊತೆಗೆ ನಾಳೆ ಬೆಳಿಗ್ಗೆ ಮಾತನಾಡಿ. ಇದರಿಂದ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ತಮಗೆ ಗೊತ್ತಿದೆ, ಒಂದು ಸಾವಿರ ಬಸ್ಸುಗಳನ್ನು ಕಳುಹಿಸಿದರೂ ಕೂಡ ತೊಂದರೆ ಪರಿಹಾರವಾಗುವುದಿಲ್ಲ. ಮೂರು ಸಾವಿರ ಬಸ್ಸುಗಳು ಓಡಾಡುವಂಥ ಸಂದರ್ಭದಲ್ಲಿ ಒಂದು ಸಾವಿರ ಬಸ್ಸುಗಳನ್ನು ಹಾಕಿದ್ದೇವೆ ಎಂದು ತಾವು ಹೇಳಿದ್ದೀರಿ. ಈಗ ನಾನು ತಿಳಿದುಕೊಂಡು ಬಂದ ಪ್ರಕಾರ ದಕ್ಷಿಣ ಕನ್ನಡದಲ್ಲಿ 30 ಬಸ್ಸುಗಳು ಕೂಡ ಅಲ್ಲಿ ಇಲ್ಲ. ಇಲ್ಲದೇ ಇರತಕ್ಕಂಥ ಬಸ್ಸುಗಳನ್ನು ತಾವು ಎಲ್ಲಿಂದ ತರಿಸಿಕೊಳ್ಳುತ್ತೀರಿ? ಇದರಿಂದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲ, ಎಲ್ಲವೂ ಶಾಂತವಾಗಿದೆ ಎಂದು ಹೇಳಿದರೆ ಅದು ಹೇಗೆ ಸಾಧ್ಯ? ಸಾರ್ವಜನಿಕರಿಗೆ, ಮಕ್ಕಳಿಗೆ

ತೊಂದರೆಯಾಗಿರುವುದನ್ನು ಗಮನಿಸಿ, ಸಹಾನುಭೂತಿಯಿಂದ ಇದನ್ನು ಪರಿಶೀಲನೆ ಮಾಡಬೇಕು. ಇದನ್ನು ಪರ್ಯಾಯ ವ್ಯವಸ್ಥೆಯಿಂದ ಪರಿಹಾರ ಮಾಡುತ್ತೇವೆ ಎಂದು ಕುಳಿತುಕೊಂಡರೆ ಖಂಡಿತವಾಗಿಯೂ ಇದು ಪರಿಹಾರವಾಗುವುದಿಲ್ಲ. ಆದ್ದರಿಂದ ದಯವಿಟ್ಟು ನಾಳೆಯಾದರೂ ಅವರನ್ನು ಕರೆಸಿ ಮಾತನಾಡಬೇಕು ಮತ್ತು ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಸಮಸ್ಯೆ ಏನು ಎಂಬುದು ತಮಗೆ ಗೊತ್ತಿದೆ. ಸಮಸ್ಯೆಯನ್ನು ಪರಿಹರಿಸುವುದಕ್ಕೆ ಏನಾದರೂ ಪರಿಹಾರವನ್ನು ಘೋಷಣೆ ಮಾಡಿ. ಅನೇಕ ಬಾರಿ ನಾವು ಟ್ಯಾಕ್ಸನ್ನು ಏರಿಸಿದ್ದುದು ಇದೆ. ಅದೇ ಪ್ರಕಾರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದನ್ನು ಕಡಿಮೆ ಮಾಡಿದ ಪ್ರಸಂಗ ಕೂಡ ಇದೆ. ಅದೇನೂ ಹೊಸ ಕಾರ್ಯಕ್ರಮವಾಗುವುದಿಲ್ಲ ಅಥವಾ ನೀವು ತೆರಿಗೆಯನ್ನು ಏರಿಸಿದ ಕೂಡಲೇ ಅದನ್ನು ಕೆಳಗಿಳಿಸಿದರೆ ನಿಮ್ಮ ಪ್ರತಿಷ್ಠೆಗೆ ತೊಂದರೆಯಾಗುತ್ತದೆ ಎಂದು ತಿಳಿದುಕೊಂಡರೆ ಅದು ಸರಿಯಾಗುವುದಿಲ್ಲ. ಜನರ ಅನುಕೂಲತೆಗೆ ಅನ್ವಯಿಸಿ ತೆರಿಗೆ ಏರಿಸುವುದು ಅಥವಾ ಕಡಿಮೆಯಾಗುವುದು ಆಗಬೇಕೆ ಹೊರತು ಇದು ಸರಿಯಾಗಿದೆ, ಎಂದು ತಮ್ಮ ಪ್ರತಿಷ್ಠೆಗಾಗಿ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಏನಿದೆ ಅದನ್ನು ದಯವಿಟ್ಟು ಮಾಡಬೇಡಿ.

SRI H.N.NANJE GOWDA :- Mr. Speaker Sri, I would like to draw your attention to rule 345 - Statement by a Minister with the consent of the Speaker - which says thus.

" A Minister may make a statement with the permission of the Speaker on a matter of public importance. On such a statement, no discussion shall be allowed. Members may be permitted to ask clarifications for the purpose of eliciting further information"

Therefore, I would like to submit that we are within our right to seek clarification. This I would like to convey to the Hon'ble Member Sri K.N.Nage Gowda.

ಮಾನ್ಯ ಮಂತ್ರಿಗಳು ಹೊರ ರಾಜ್ಯಗಳ ಹೋಲಿಕೆಯನ್ನು ಕೊಟ್ಟಿದ್ದಾರೆ. 50 ರೂಪಾಯಿಗೆ ಏರಿಸುವುದಕ್ಕೆ ಆಂಧ್ರದಲ್ಲಿ ಎಷ್ಟು, ತಮಿಳುನಾಡು, ಕೇರಳದಲ್ಲಿನ

ಹೋಲಿಕೆಯನ್ನು ಕೊಡುತ್ತಾರೆ. ಈಗ ನೀವು ಏನು ಟ್ಯಾಕ್ಸ್ ಹಾಕಿದ್ದೀರಿ on par with neighbouring states ಅದನ್ನು ರೆಡ್ಯೂಸ್ ಮಾಡುವುದು ಅಥವಾ ಇನ್‌ಕ್ರೀಸ್ ಮಾಡುವುದನ್ನು ಮಾಡುತ್ತೀರಾ? ಡೀಸೆಲ್ ರೇಟ್, ಪೆಟ್ರೋಲ್ ರೇಟ್, ಮದುವೆ ಛತ್ರಕ್ಕೆ ಹಾಕಿರುವುದು, ಸ್ಪೇರ್ ಪಾರ್ಟ್ಸ್‌ಗೆ ಹಾಕಿರುವುದು ಅದನ್ನು ಹಾಗೆಯೇ ಮಾಡುತ್ತೀರಾ? Can you restrict your taxation policy to be on par with neighbouring States. This is not an excuse

ಧೈರ್ಯವಾಗಿ ನಾವು ಟ್ಯಾಕ್ಸ್ ಹಾಕಿದರೆ ಅದರ ಕಾರಣ ಕೊಟ್ಟು ಹಾಕಿದ್ದೇವೆ ಎಂದು ಹೇಳಿಕೊಳ್ಳಿ. ಬೇರೆ ರಾಜ್ಯಗಳ ಉದಾಹರಣೆಯನ್ನು ಕೊಟ್ಟುಕೊಂಡು ನಿಮಗೆ ಕನ್ವೀನಿಯೆಂಟ್ ಆದಾಗ ನಾವು ಉಪಯೋಗಿಸಿಕೊಳ್ಳುತ್ತೇವೆ, ನಮಗೆ ಕನ್ವಿನಿಯಂಟ್ ಇಲ್ಲದಿದ್ದರೆ ಉಪಯೋಗಿಸಿಕೊಳ್ಳುವುದಿಲ್ಲ ಎಂದರೆ ಅದು ಆಗುವುದಿಲ್ಲ. ಸೇಲ್ಸ್ ಟ್ಯಾಕ್ಸ್, ಮೋಟಾರ್ ಟ್ಯಾಕ್ಸ್ ಇಡೀ ದೇಶಕ್ಕೆ ಹೋಲಿಸಿದರೆ ಇಲ್ಲಿ ಬಹಳ ಜಾಸ್ತಿ ಇದೆ. ಇದು ತರವಲ್ಲ. ಇನ್ನೊಬ್ಬ ಮಂತ್ರಿಗಳು ಏನು ಹೇಳುತ್ತಾರೆಂದರೆ, ಒಂದು ಸಾವಿರ ಸ್ಪೇರ್ ಬಸ್ಸುಗಳು ಇವೆಯೆಂದು ಹೇಳುತ್ತಾರೆ. would like to know whether he stands by his statement?

ಅಧಿಕೃತವಾಗಿ ಓಡಾಡತಕ್ಕ ಬಸ್ಸುಗಳಲ್ಲದೆ, ಒಂದು ಸಾವಿರ ಬಸ್ಸುಗಳು ರಿಸರ್ವ್‌ನಲ್ಲಿರುವುದು ಎಂದು ಹೇಳಿದ್ದಾರೆ. ಒಂದು ಸಾವಿರ ಬಸ್ಸುಗಳು ರಿಸರ್ವ್‌ನಲ್ಲಿಟ್ಟಿದ್ದರೆ, it is a dead capital. ಸರ್ಕಾರ ಸಮಯಕ್ಕೊಂದು ನೆಪ ಹೇಳುವುದು ಬೇಡ. ದಯಮಾಡಿ, ನಾನು ಹೇಳುವುದನ್ನು ಕೇಳಿ. ಒಂದು ಸೀಟಿಗೆ 50 ರೂಪಾಯಿ ಏರಿಸಿದ್ದೀರಿ, ಡೀಸೆಲ್ ರೇಟ್ ಏರಿಸಿದ್ದೀರಿ, ಬಿಡಿ ಭಾಗಗಳ ದರ ಏರಿಸಿದ್ದೀರಿ. ಟೈರು, ಟ್ಯೂಬ್ ಬಿಟ್ಟು ಉಳಿದ ಎಲ್ಲದರ ಮೇಲೂ ಏರಿಸಿದ್ದೀರಿ. ಇವೆಲ್ಲವೂ ಯಾರಿಗೆ ಬೀಳುತ್ತದೆಂದು ಮಾಡಿದ್ದೀರಿ. ಇದನ್ನು ಅವರ ಕೈಯಿಂದ ಏಕೆ ಕೊಡುತ್ತಾನೆ, ಅವನು ಜನರ ಮೇಲೆ ಹಾಕುತ್ತಾನೆ. ಆದ್ದರಿಂದ, ಜನರಿಗೆ ಹೊರಲಾರದಷ್ಟು ಹೊರೆಯನ್ನು ಏರಿಸುವುದಕ್ಕೆ ಹೋಗಬೇಡಿ. ಇದು ಬುದ್ಧಿವಂತಿಕೆ ಅಲ್ಲ. ಇದನ್ನು ಕ್ಲಾರಿಫೈ ಮಾಡಿ, ಏನಾದರೊಂದು ಸ್ಟೇಟ್‌ಮೆಂಟ್ ಇಷ್ಯೂ ಮಾಡಿ. ನೀವು ಆವರನ್ನು ಕರೆದು ಮಾತನಾಡುವುದು ಏನೂ ಇಲ್ಲ. ನೀವು ಹಾಕಿರತಕ್ಕ 50 ರೂಪಾಯಿ ತೆಗೆದರೆ ಆಯಿತು, ಅವರ ಹತ್ತಿರ ಮಾತನಾಡುವುದು ಏನಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ನಾವು ಏರಿಸಿರುವುದು ಸರಿಯೋ ಅಲ್ಲವೋ ಎನ್ನುವುದನ್ನು ಹೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶಗಳಿವೆ. ಈಗ ಸೀಮಿತವಾಗಿ, ಬಸ್ಸಿನ ಮೇಲೆ ಹಾಕಿರತಕ್ಕ ತೆರಿಗೆ ಹೆಚ್ಚಾಗಿದೆ ಎಂದು ಅವರೇನು ಚಳುವಳಿ ಮಾಡುತ್ತಿದ್ದಾರೆ. ನಮ್ಮ ಪ್ರಕಾರ 4 ವರ್ಷಗಳಿಂದ ಅವರಿಗೆ ತೆರಿಗೆ ಹಾಕಿರಲಿಲ್ಲ. ಇವತ್ತು ಸ್ವಲ್ಪ ಮಟ್ಟಿಗೆ ಹಣಕಾಸಿನ ಕ್ರೋಢೀಕರಣದ ಅನಿವಾರ್ಯತೆ ಇದ್ದುದರಿಂದ, ಅಲ್ಲ 50 ರೂಪಾಯಿ ಹೆಚ್ಚಿಗೆ ಹಾಕಿರುವುದು ಸರಿ. ಬೇರೆ ರಾಜ್ಯಗಳ ಹೋಲಿಕೆ ಏಕೆ ಮಾಡಿದ್ದೇನೆಂದರೆ, ಸನ್ಮಾನ್ಯ ಮೊಯಿಲಿಯವರು ಹೇಳುತ್ತಾ, ಈ ತೆರಿಗೆ ಹಾಕಿರುವುದು ಮಾನವೀಯವಾಗಿದೆ, ಮಾನವೀಯತೆಯಿಂದ ಇಲ್ಲವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಮಾನವೀಯತೆ ಇದೆಯೆನ್ನುವ ಕಾರಣಕ್ಕೋಸ್ಕರವೇ, ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡತಕ್ಕಂಥ ವಿಚಾರ ಹೇಳತಕ್ಕಂಥಾದ್ದು. ಅದರ ಅರ್ಥ, ಅವರು ಮಾಡಿದ್ದಾರೆ, ಅದಕ್ಕಾಗಿ ನಾವೂ ಮಾಡಬೇಕು ಎನ್ನುವ ಅಭಿಪ್ರಾಯವಲ್ಲ. ಸನ್ಮಾನ್ಯ ಮೊಯಿಲಿಯವರು ಹೇಳಿದಂತೆ, ಖಾಸಗಿ ಮಾಲೀಕರು ಭೇಟಿ ಮಾಡಿದ್ದರು, ಕಂಡಿದ್ದರು ಸಿಗಲಿಲ್ಲ, ಇದು ಇಲ್ಲವೇ ಇಲ್ಲ. ನನ್ನನ್ನು ಯಾರೂ ಭೇಟಿ ಮಾಡಲಿಲ್ಲ ಅಥವಾ ಭೇಟಿ ಮಾಡುತ್ತೇನೆಂದು ಎಲ್ಲಿಯೂ ಇಲ್ಲ, ಇದು ನಮಗೆ ಗೊತ್ತಿಲ್ಲ. ಇದುವರೆಗೂ ಮುಖ್ಯ ಮಂತ್ರಿಗಳನ್ನಾಗಲ್ಲಿ ಅಥವಾ ನನ್ನನ್ನಾಗಲೀ ಭೇಟಿ ಮಾಡಿಲ್ಲ. ತಾವು ಹೆಚ್ಚು ಮಾಡಿದ್ದೀರಿ, ನಾವು ಚಳುವಳಿ ಮಾಡುತ್ತೇವೆನ್ನುವ ಮಾತನ್ನು ಅವರು ಎಲ್ಲಿಯೂ ಹೇಳಿಲ್ಲ. ಏಕಾಏಕಿ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟು, ನಾವು ಚಳುವಳಿಯನ್ನು ಮಾಡುತ್ತೇವೆ, ಬಸ್ಸನ್ನು ನಿಲ್ಲಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದರಲ್ಲಿಗೆ ಜಸ್ಟಿಫಿಕೇಷನ್ ಏನಿದೆ? ಅವರು ನನ್ನನ್ನು ಭೇಟಿ ಆಗಿಲ್ಲ, ಮುಖ್ಯ ಮಂತ್ರಿಗಳನ್ನು ಭೇಟಿ ಆಗಿಲ್ಲ, ಅದಕ್ಕೋಸ್ಕರ ನಾವು ಕಡಿಮೆ ಮಾಡುವುದಕ್ಕಾಗುವುದಿಲ್ಲ.....

(ಗೊಂದಲ)

ಶ್ರೀ ಸಿದ್ದರಾಮಯ್ಯ :- ನಾನು ಯೀಲ್ಡ್ ಆಗಿಲ್ಲ, ನಾನು ಮಾತನಾಡುವುದು ಮುಗಿಸಿಲ್ಲ. ದಯಮಾಡಿ, ನಾನು ಮಾತನಾಡಿ ಮುಗಿಸಿದ ಮೇಲೆ ಹೇಳಿ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ, ಶ್ರೀಮಾನ್ ಮೊಯಿಲಿಯವರು ಮಾತನಾಡುವಾಗ ಹಾಗೆ ಹೇಳಿದರು, ಅವರು ಬಂದಿದ್ದರು, ನಿಮ್ಮನ್ನು ಕಾಣುವುದಕ್ಕೆ ಪ್ರಯತ್ನಪಟ್ಟರು, ನೀವು ಸಿಗಲಿಲ್ಲವೆಂದು ಹೇಳಿದರು. ಆದರೆ, ಅವರು ಬಂದು ನೋಡಲಿಲ್ಲ. ಇದರಲ್ಲಿ ನಮಗೆ ಯಾವುದೇ ಪ್ರೆಸ್ಟೀಜ್ ಇಲ್ಲ. ನಾನು ಏನನ್ನು ಹೇಳಿದೆಯಂದರೆ, ಅವರು ಏಕಾಏಕಿ ಚಳುವಳಿಯನ್ನು ಮಾಡಿದ್ದಾರೆ. ನಾನು ನಿನ್ನೆಯೂ ಕೂಡ ಹೇಳಿದೆ. ತೆರಿಗೆ ಹೆಚ್ಚು ಮಾಡುವುದು ಅಥವಾ ಕಡಿಮೆ ಮಾಡುವುದು ಈ ಸದನಕ್ಕೆ ಸಂಬಂಧಪಟ್ಟಿದ್ದುದು ಮತ್ತು

ಸರ್ಕಾರ ಏನು ಮಾಡಬೇಕೆಂಬುದನ್ನು ವಿಚಾರ ಮಾಡುತ್ತದೆ. ಅದು ಬೇರೆ ವಿಚಾರ. ಆದರೆ, ಅವರು ಚಳುವಳಿ ಮಾಡಿದ್ದಾರೆ. ಇಲ್ಲಿ ಒಟ್ಟಾರೆ ಸದಸ್ಯರ ಕಳಕಳಿ ಏನು, ಜನರಿಗೆ ತೊಂದರೆಯಾಗಿದೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಜನರಿಗೆ ತೊಂದರೆಯಾಗದ ರೀತಿಯಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು, ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದೇವೆ. ಇದರ ಜೊತೆಗೆ ಮ್ಯಾಕ್ಸಿ ಕ್ಯಾಬ್‌ಗಳನ್ನು ಕೂಡ ಹಾಕಿದ್ದೇವೆ ಮತ್ತು ಬೇರೆ ಬೇರೆ ಬಹಳಷ್ಟು ಲೈಟ್ ವೆಹಿಕಲ್ಸ್ ಕೂಡ ಓಡಾಡುತ್ತಿವೆ. ವಿದ್ಯಾರ್ಥಿಗಳು ಎಲ್ಲೆಲ್ಲಿ ಶಾಲಾ ಪ್ರದೇಶಗಳಲ್ಲಿ ಹೋಗಬೇಕಾಗಿದೆ, ಅಲ್ಲೆಲ್ಲಾ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಬೆಂಗಳೂರು ನಗರದಲ್ಲಿ ಓಡಾಡುತ್ತಿದ್ದ 50 ಪುಷ್ಪಕ್ ಬಸ್ಸುಗಳನ್ನು ಕೂಡ, ಇಲ್ಲಿಂದ ತೆಗೆದು ಬೇರೆ ಬೇರೆ ಪ್ರದೇಶಗಳಿಗೆ ಹೋಗತಕ್ಕ ವ್ಯವಸ್ಥೆ ಮಾಡಿದ್ದೇವೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಸಾಧ್ಯವಾದ ಮಟ್ಟಿಗೆ ಸರ್ಕಾರ ನೋಡಿಕೊಂಡಿದೆ. ನಾನು, ತಮ್ಮ ಮೂಲಕ ಮತ್ತೊಮ್ಮೆ ಹೇಳುತ್ತೇನೆ. ಮತ್ತು ಬಸ್ ಮಾಲೀಕರಿಗೆ ಮನವಿ ಮಾಡುತ್ತೇನೆ. ದಯಮಾಡಿ ಅವರು ಬಂದು, ನಮ್ಮ ಜೊತೆ ಚರ್ಚೆ ಮಾಡುವುದಕ್ಕೆ ಸರ್ಕಾರ ಮುಕ್ತವಾಗಿದೆ. ಅವರು ಚರ್ಚೆ ಮಾಡಬಹುದು ಮತ್ತು ಮುಷ್ಕರದ ಹಾದಿಯನ್ನು ಬಿಡಬೇಕೆಂದು, ತಮ್ಮ ಮೂಲಕ ಅವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ :- ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೇನೆ. ನಾನು ಚೇರ್ ಕೇಳುತ್ತಿದ್ದೇನೆ. ಕ್ಲಾರಿಫಿಕೇಶನ್ ಕೇಳುವುದಕ್ಕೆ 345ರ ಪ್ರಕಾರ ಚರ್ಚೆಗೆ ಅವಕಾಶವಿಲ್ಲ; ಕ್ಲಾರಿಫಿಕೇಶನ್ ಬರುವುದಿಲ್ಲ. ತಾವು ರೂಲ್ಸ್ ಬಿಟ್ಟು ಹೋಗಬಾರದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ರೂಲ್ 345ರ ಕೆಳಗೆ ಈಗಾಗಲೇ ಮಾನ್ಯ ನಂಜೇಗೌಡರು ಹೇಳಿದ್ದಾರೆ. ಅದರ ಪ್ರಕಾರ 23 are asking information. ಇದು ನಮಗೆ ಅರ್ಥವಾಗಲಿಲ್ಲ. ಯಾವುದೇ ಒಂದು ಬೇಡಿಕೆ ನ್ಯಾಯವಾಗಿದ್ದರೆ, ತಕ್ಷಣ ಅದರ ಮೇಲೆ ನಿರ್ಣಯ ತೆಗೆದುಕೊಳ್ಳಬಹುದು. ನನಗೆ ನೋಡಲಿಲ್ಲ, ಮುಖ್ಯ ಮಂತ್ರಿಗಳನ್ನು ನೋಡಲಿಲ್ಲವೆಂದು ಹೇಳಬಾರದು. ಆಮೇಲೆ ಬಂದು ಚರ್ಚೆ ಮಾಡಲಿ.

ಉಪಾಧ್ಯಕ್ಷರು :- ಯಾವ ಕಾಂಟೆಕ್ಸ್ಟ್‌ನಲ್ಲಿ ಮೇಲೆ ಹೇಳಿದ್ದೇನೆ ಎನ್ನುವುದನ್ನು ಅವರು ಈಗಾಗಲೇ ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಈ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಇದು ಮಾಡತಕ್ಕದ್ದು ಸರಿಯಲ್ಲ, ಇದನ್ನು ಸರಿಪಡಿಸಬೇಕೆಂಬ

ಮಾತನ್ನು ಶಾಸಕರು ಹೇಳಿದ ಮೇಲೂ, ಅವರು ಬರಬೇಕು, ಖಾಸಗೀ ಬಸ್ಸುಗಳು ಮಾಲೀಕರು ಬರಬೇಕು, ಅವರೇ ಚರ್ಚೆ ಮಾಡಬೇಕೆಂದು ಹೇಳಿದರೆ ಹೇಗೆ? ಅದರಲ್ಲ ಏನಿದೆ, ಅನೇಕ ಮಾನ್ಯ ಸದಸ್ಯರು ಇಲ್ಲಿ ತಮಗೆ ಕನ್‌ವೀನ್ಸ್ ಮಾಡುತ್ತಿದ್ದಾರೆ. ಹಾಕಿರತಕ್ಕ ತೆರಿಗೆ ಸರಿಯಲ್ಲವೆಂದು ಹೇಳಿದ್ದಾರೆ. ನೀವು ಟೈರ್ ಮೇಲೆ ತೆರಿಗೆ ಹಾಕಿದ್ದೀರಿ, ಬಿಡಿ ಭಾಗಗಳ ಮೇಲೆ ಹಾಕಿದ್ದೀರಿ. ಇದರಿಂದಾಗಿ ಬಸ್ಸುಗಳಿಲ್ಲದೆ ಮಕ್ಕಳಿಗೆ ತೊಂದರೆಯಾಗಿದೆ. ಮತ್ತು ವಿಶೇಷವಾಗಿ, ಶಿವಮೊಗ್ಗ, ಮಂಗಳೂರು, ಚಿಕ್ಕಮಗಳೂರು, ಹಾಸನ ಈ ಭಾಗದಲ್ಲಿ ತೊಂದರೆಯಾಗಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿದರೂ ಪುನಃ ಅವರೇ ಬಂದು ಚರ್ಚೆ ಮಾಡಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ಎರಡನೆಯದು, ಒಂದು ಸಾವಿರ ಬಸ್ಸುಗಳನ್ನು ಸ್ಪೇರ್ ಮಾಡಬೇಕಾದರೆ, ಅಲ್ಲಿ ತೊಂದರೆಯಾಗುತ್ತದೆ. ಒಂದು ಸಾವಿರ ಬಸ್ಸುಗಳು ಸರ್ಪಲಸ್ ಇದ್ದು, ಅಲ್ಲಿಂದ ಇಲ್ಲಿಗೆ ಷಿಫ್ಟ್ ಮಾಡಿದ್ದೇವೆಂದು ಹೇಳಿದರೆ, ಅದು ಒಂದು ಮಾತು. ಆದರೆ, ಒಂದು ಸಾವಿರ ಬಸ್ಸು ಬರಬೇಕಾದರೆ, ಸಾಮಾನ್ಯವಾದ ಮಾತಲ್ಲ. ಏನೋ 5 10 ಆದರೆ ಪರವಾಯಿಲ್ಲ. ಒಂದು ಜಾತ್ರೆಗೆ 50-60 ಬಸ್ಸು ಕೊಡಬೇಕಾದರೆ ಎಷ್ಟೋ ತಾಪತ್ರಯವಾಗುತ್ತದೆ. ಅನೇಕ ಜನರಿಗೆ ತೊಂದರೆ ಮಾಡಿ ಕೊಡಬೇಕಾಗುತ್ತದೆ. ಇಲ್ಲಿ ಒಂದು ಸಾವಿರ ಬಸ್ ಬರಬೇಕೆಂದರೆ, ಅಲ್ಲಿನ ಮಕ್ಕಳಿಗೆ, ಅಲ್ಲಿನ ಪ್ಯಾಸೆಂಜರ್ಸ್‌ಗೆ, ಅಲ್ಲಿನ ನಾಗರೀಕರಿಗೆ ತೊಂದರೆಯಾಗುವುದಿಲ್ಲವೇ? ಇದನ್ನು ಸ್ಪಷ್ಟವಾಗಿ, ಕನ್‌ವೀನ್ಸ್ ಮಾಡತಕ್ಕ ರೀತಿಯಲ್ಲಿ ಹೇಳಿದರೆ, ನೀವು ಒಪ್ಪಿಕೊಳ್ಳಬೇಕು. ಸರ್ಪಲಸ್ ತಂದಿದ್ದೇವೆಂದು ಒಂದು ಸಾರಿ ಹೇಳುತ್ತೀರಿ, ರಿಸರ್ವ್‌ನಲ್ಲಿಟ್ಟಿದ್ದೇವೆ ಕೊಟ್ಟು ಕಳುಹಿಸಿದ್ದೇವೆಂದು ಒಂದು ಸಾರಿ ಹೇಳುತ್ತೀರಿ. ಒಂದು ಸಾರಿ ಮ್ಯಾಕ್ಸಿ ಕ್ಯಾಬ್ ಹಾಕಿ ಸರಿ ಮಾಡುತ್ತೇವೆಂದು ಹೇಳುತ್ತೀರಿ. ಈ ರೀತಿಯಾಗಿ ಹೇಳತಕ್ಕಂಥಾದು ಸರಿಯಲ್ಲ. ಇಷ್ಟೆಲ್ಲಾ ಸದಸ್ಯರು ಹೇಳಿದಾಗ, ಈ ರೀತಿಯಾದ ಹಠಮಾರಿತನ ಇದ್ದರೆ, ಇದಕ್ಕೆ ನಮ್ಮ ಬಲವಾದ ಪ್ರೊಟೆಸ್ಟ್ ಇದೆ. ಏಕೆಂದರೆ, ಇದು ಅನ್ಯಾಯ ಇದೆ, ಇದನ್ನು ಸರಿಪಡಿಸಿ ಎಂದು ಹೇಳಿದರೂ ಕೂಡ, ತಾವು ಕೇಳುವುದಕ್ಕೆ ತಯಾರಿಲ್ಲ. ನೀವು ಹೇಳಿದ್ದೇ ಸರಿ ಎಂದು ಹೇಳುವುದಾದರೆ, ನಾವು ಈ ಸಭೆಯಲ್ಲಿ ಭಾಗವಹಿಸುವುದಿಲ್ಲ, ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ :- ಇಂತಹ ಸಣ್ಣಪುಟ್ಟ ವಿಷಯಗಳಿಗೆಲ್ಲಾ ನೀವು ವಾಕ್ ಔಟ್ ಮಾಡಿದರೆ ಹೇಗೆ? ಇವರಿಗೆ ಪ್ರಜಾತಂತ್ರದ ಎಸೆನ್ಸ್ ಗೊತ್ತಿಲ್ಲ. ಅವರು ಯಾರಿಗೂ ಹೇಳದೇ, ಕೇಳದೇ ಅವರಷ್ಟಕ್ಕೆ ಅವರೇ ಸ್ಟೈಕ್ ಮಾಡಿದರೆ ಸರಿಯೇ? ಸಿಮೆಂಟ್ ಮೇಲೆ

ಟ್ಯಾಕ್ಸ್ ಹಾಕಿದ್ದೇವೆ, ಅವರು ಮುಚ್ಚಿಕೊಳ್ಳಲಿ, ಕಮರ್ಷಿಯಲ್ ಟ್ಯಾಕ್ಸ್ ಹಾಕಿದ್ದೇವೆ, ಅವರೆಲ್ಲರೂ ಮುಚ್ಚಿಕೊಳ್ಳಲಿ. ಅವರು ಒಳಗಡೆ ಎಷ್ಟು ಪ್ಯಾಸೆಂಜರ್ಸ್ ಹಾಕುತ್ತಾರೋ, ಟಾಪ್ ಮೇಲೆಯೂ ಅಷ್ಟೆ ಪ್ಯಾಸೆಂಜರ್ಸ್ ಹಾಕುತ್ತಾರೆ. ಇದನ್ನು ಯಾರೂ ಕೇಳುವುದಿಲ್ಲ. ವಿರೋಧ ಪಕ್ಷದವರು ಯಾವಾಗಲೂ ಟ್ಯಾಕ್ಸ್ ಜಾಸ್ತಿ ಎಂದೇ ಹೇಳುವುದು. ನಾವು ಹೇಳುವುದು ಎಲ್ಲವನ್ನೂ ನೀವು ಒಪ್ಪಿದ್ದೀರಾ? Are you democrat? When they are going on strike, should they not tell the Government? ನೀವು ಮಾತನಾಡಬೇಕೆಂದು, ಮಾತನಾಡುತ್ತಾ ಇಲ್ಲ. ಯಾರನ್ನೋ ಪೈಸ್ ಮಾಡಬೇಕಾಗಿ ಮಾತನಾಡುತ್ತೀರಿ. ನೀವು ಬೇಕಾದರೆ ಸಭಾತ್ಯಾಗ ಮಾಡಿ ಹೋಗಿ.

ಶ್ರೀ ಸಿದ್ಧರಾಮಯ್ಯ :- ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಸ್ಸುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದಿಲ್ಲ. ಇರತಕ್ಕಂಥ ಬಸ್ಸುಗಳನ್ನು ಓಡಿಸುವುದಕ್ಕೆ, ಡ್ರೈವರ್ಸ್ ಮತ್ತು ಕಂಡಕ್ಟರುಗಳೂ ಇದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ರೈಲು ಬಿಡುವುದು ನೀವು. ನಾವು ಹೇಳುವುದು ನಿಜ. ಮಾನ್ಯ ಅಧ್ಯಕ್ಷರೇ, ಒಂದು ಸಾವಿರ ಬಸ್ಸುಗಳನ್ನು ಹೇಗೆ ಮಾಡಿಸಿದ್ದೇವೆ ಎನ್ನುವುದಕ್ಕೆ ಬಿ.ಟಿ.ಎಸ್.ನಿಂದ 250 ಬಸ್ಸುಗಳು ಬಳ್ಳಾರಿಯಿಂದ 40 ಬಸ್ಸುಗಳು, ಬಿಜಾಪುರದಿಂದ 50 ಬಸ್ಸುಗಳು, ಬಾಗಲಕೋಟೆಯಿಂದ 30 ಬಸ್ಸುಗಳು, ಹುಬ್ಬಳ್ಳಿಯಿಂದ 75 ಬಸ್ಸುಗಳು, ಗದಗ್‌ನಿಂದ 25 ಬಸ್ಸುಗಳು, ಬೆಳಗಾಂನಿಂದ 25 ಬಸ್ಸುಗಳು, ಉತ್ತರ ಕನ್ನಡದಿಂದ 50 ಬಸ್ಸುಗಳು, ದಾವಣಗೆರೆಯಿಂದ 75 ಬಸ್ಸುಗಳು, ಹಾಸನ 50 ಬಸ್ಸುಗಳು, ಮೈಸೂರು 50 ಬಸ್ಸುಗಳು, ಬೆಂಗಳೂರು 30 ಮಂಗಳೂರು 25 ಹೀಗೆ 788 ಬಸ್ಸುಗಳನ್ನು ವಿವಿಧ ಜಿಲ್ಲೆಗಳಲ್ಲಿ ಹಾಕಿದ್ದೇವೆ. ಇಡೀ ರಾಜ್ಯದಲ್ಲಿ ಖಾಸಗಿ ಬಸ್ಸುಗಳು ಇಲ್ಲ. ಪ್ರೈವೇಟ್‌ನವರು ಕೆಲವು ಜಿಲ್ಲೆಗಳಲ್ಲಿ ಮಾತ್ರ ಓಡಿಸುತ್ತಿದ್ದರೆ, ಇನ್ನು ಉಳಿದ ಕಡೆ ಎಲ್ಲಾ ಸರ್ಕಾರಿ ಬಸ್ಸುಗಳು ಓಡಾಡುತ್ತಿದ್ದವು.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ಎಲ್.ಜಾಲಪ್ಪ:- ಅವರಿಗೆ ತೊಂದರೆ ಆಗಿದೆ. ಅದನ್ನು ಸರ್ಕಾರಕ್ಕೆ

ಹೇಳಬೇಕು. ಮೂಗು ಹಿಡಿದರೆ ಬಾಯಿ ಬಿಡುತ್ತಾರೆ ಅಂದ ಹಾಗೆ ಇವರು ಮಾಡುತ್ತಿದ್ದಾರೆ. ಇದಕ್ಕೆಲ್ಲಾ ನಾವು ಈಲ್ಡ್ ಆಗುವುದಿಲ್ಲ. We are not prepared to yield for all such things 15 ದಿವಸ ಸರ್ಕಾರಕ್ಕೆ ಟೈಮ್ ಕೊಟ್ಟು ನೀವು ನಮ್ಮ ಕಷ್ಟ ಸುಖ ಪರಿಹಾರ ಮಾಡಿ ಎಂದು ಅವರು ಹೇಳಲಿ. ಅದೇನೂ ಇಲ್ಲದೆ ಧೀಡೀರ್ ಎಂದು ಸ್ಟ್ರೈಕ್ ಮಾಡಿ ಬಿಟ್ಟರೆ ಹೇಗೆ? ಅವರ ಬಸ್ಸುಗಳಲ್ಲಿ ಒಳಗೆ ಎಷ್ಟು ಸೀಟು ಇರುತ್ತದೆಯೋ ಅಷ್ಟು ಸೀಟುಗಳನ್ನು ಮೇಲೆ ತುಂಬಿಕೊಂಡು ಹೋಗುತ್ತಾರೆ. ಅದರ ಬಗ್ಗೆ ಇವರು ಮಾತನಾಡುವುದಿಲ್ಲ. ಈ ರೀತಿ ಆದರೆ ಸರ್ಕಾರ ನಡೆಸುವುದು ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಈಗ ತಾವು ಒಂದು ಸಾವಿರ ಬಸ್ಸುಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದಿರಿ, ಎಲ್ಲಿಂದ ಬಿಡುಗಡೆ ಮಾಡಿದ್ದು.

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ:- ನಾವು ಸುಳ್ಳು ಹೇಳಬೇಕಾದುದು ಅನಾವಶ್ಯಕ. ನಾವು ಸುಳ್ಳು ಹೇಳುತ್ತಿದ್ದೇವೆ ಎಂದು ತಾನೇ ತಾವು ಹೇಳುತ್ತಿರುವುದು. ಬೇಕಾದರೆ ಹೋಗಿ ನೋಡಿಕೊಂಡು ಬನ್ನಿ. ಈಗ ಮಂಡ್ಯ ಜಿಲ್ಲೆಗೆ ತಾವು ಹೋಗಿ ನೋಡಿಕೊಂಡು ಬಂದು ಹೇಳಿ. ತಾವು ಸದನದಲ್ಲಿ ಸುಳ್ಳು ಹೇಳಿದ್ದೀರಿ ಎಂದು ನಮ್ಮ ಮೇಲೆ ನಾಳೆ ಪ್ರಿವಿಲೇಜ್ ಹಾಕಿ.

ಶ್ರೀ ವಾಟಾಳ್ ನಾಗರಾಜ್ :- ಜಾಲಪ್ಪನವರೇ, ತಾವು ಒಂದೇ ಸಾರಿ ಇಷ್ಟು ಕೋಪಿಸಿಕೊಂಡರೆ ಹೇಗೆ?

(ಗೊಂದಲ)

ಶ್ರೀಆರ್.ಎಲ್.ಜಾಲಪ್ಪ:- ನಾಗರಾಜ್‌ರವರೇ, ಸುಮ್ಮನೇ ಮಾತನಾಡುವುದರಿಂದ ಏನೂ ಪ್ರಯೋಜನ ಇಲ್ಲ. ಅವರು ನಮಗೆ ನೋಟೀಸ್ ಕೊಡಬೇಕೋ ಬೇಡವೋ. ನೀವು ಟ್ಯಾಕ್ಸ್ ಹಾಕಿರುವುದು ಸರಿಯಾಗಿಲ್ಲ; ನಿಮಗೆ ನಾವು 15 ದಿವಸ ಟೈಮ್ ಕೊಡುತ್ತೇವೆ. ಅಷ್ಟರಲ್ಲಿ ಸರಿ ಮಾಡದಿದ್ದರೆ ಸ್ಟ್ರೈಕ್ ಹೋಗುತ್ತೇವೆ ಎಂದು ಹೇಳಲಿ. ಅದೇನೂ ಇಲ್ಲ. ದಿಡೀರ್ ಮುಷ್ಕರ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಜಾಲಪ್ಪನವರು ಎಲ್ಲದ್ದರು ಗೊತ್ತೆ ತಮಗೆ? ಅಲ್ಲಿದ್ದರು. ಅನೇಕ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಎದ್ದು ಎದ್ದು ನಿಂತು ಮಾತನಾಡಿರತಕ್ಕಂಥ ನಿದರ್ಶನಗಳು ಬಹಳ ಇವೆ. ಮಂತ್ರಿಗಳಾದ ಮೇಲೆ ಅವರು ಆದರ್ಶ ಹೇಳುವುದಕ್ಕೆ ಹೊರಟಿದ್ದಾರೆ ನನಗೆ ನೋವಾಗುತ್ತದೆ. ನೀವು ಹೇಳಿದಿರಿ ನೋಟೀಸ್ ಕೊಡಬೇಕು ಎಂದು. ಅಲ್ಲಾ ಸ್ವಾಮಿ, ಅಲ್ಲಿ ಈ ಪರಿಸ್ಥಿತಿ ನಿರ್ಮಾಣ ಆಗಿದೆ. ರಾಜ್ಯದಲ್ಲಿ ಇಷ್ಟೊಂದು ಗಂಭೀರವಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಒಂದು ಸಾವಿರ ಬಸ್ಸುಗಳನ್ನು ಎಲ್ಲೆಲ್ಲಿಂದ ಬಿಡುಗಡೆ ಮಾಡಿದಿರಿ ಎಂದು ಕೇಳಿದರು. ಮಾನ್ಯ ಸಿದ್ಧರಾಮ್ಯನವರು ಹೇಳಿದರು ನಾವು ರಿಸರ್ವ್ ಮಾಡಿ ಇಟ್ಟಿದ್ದ ಬಸ್ಸುಗಳು ಎಂದು. ಈಗ ಹೇಳುತ್ತಾರೆ ಬಿ.ಟಿ.ಎಸ್.ನಿಂದ 205 ಬಸ್ಸುಗಳನ್ನು ಬಿಟ್ಟಿದ್ದೇವೆ. ಇನ್ನೊಂದು ಜಿಲ್ಲೆಯಿಂದ ಬಿಟ್ಟಿದ್ದೇವೆ ಎಂದು. ಆದರೆ ಅವರ ಗತಿ ಏನು? ಪ್ರತಿ ದಿನ 250 ಬಸ್ಸುಗಳಲ್ಲಿ ಓಡಾಡುತ್ತಿದ್ದ ಜನರ ಪರಿಸ್ಥಿತಿ ಏನು? ಅಂದರೆ ಒಂದಲ್ಲ ಒಂದು ಕಡೆ ಜನರಿಗೆ ತೊಂದರೆಯಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ನಾನು ತಮಗೆ ಏನು ಹೇಳುತ್ತಿದ್ದೇನೆ ಅಂದರೆ ಈಗ ಬರಲಿ ನನ್ನ ಹತ್ತಿರ ಮಾತನಾಡಲಿ ಎಂದು ಹೇಳಿದರೆ ಸುಮ್ಮನೆ ಬಂದು ಮಂತ್ರಿಗಳ ಮುಖ ನೋಡಿಕೊಂಡು ಹೋಗತಕ್ಕಂಥಾದ್ದು ಅಲ್ಲ. ಮಾತನಾಡಿದರೆ ನಮ್ಮಲ್ಲಿ ಏನಾದರೂ ಸೂತ್ರ ಕಂಡು ಹಿಡಿಯುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಡಿ. ಏನಾದರೂ ಮಾಡುತ್ತೇವೆ ಇಲ್ಲ ಬೇರೆ ಸೂತ್ರ ಕಂಡು ಹಿಡಿಯುತ್ತೇವೆ ಎನ್ನು ಭರವಸೆ ಕೊಡಿ. ಇಲ್ಲದಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ನಾವು ಏತಕ್ಕೆ ಹೇಳೋಣ? ಅವರು ಬಂದು ನಮ್ಮ ಹತ್ತಿರ ಕಷ್ಟ ಸುಖ ಹೇಳಲಿ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಅವರು ನಮ್ಮ ಜೊತೆ ಬಂದು ಚರ್ಚೆ ಮಾಡಲಿ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಬಸ್ಸುಗಳು ಎಲ್ಲೆಲ್ಲಿಂದ ಬರುತ್ತವೆ ಎಂದು ಕೇಳುತ್ತಾರೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಖಾಸಗಿ ಬಸ್ಸುಗಳನ್ನು ಓಡಿಸುತ್ತಿಲ್ಲ. 56 ಜಿಲ್ಲೆಗಳಲ್ಲಿ ಮಾತ್ರ ಖಾಸಗಿ ಬಸ್ಸುಗಳನ್ನು ಓಡಿಸುವುದು ಉಳಿದ ಕಡೆಗಳಲ್ಲಿ ರಾಷ್ಟ್ರೀಕರಣ ಆಗಿದೆ. ಸರ್ಕಾರಿ ಬಸ್ಸುಗಳು ಓಡುತ್ತಿವೆ. ಸರ್ಕಾರಿ ಬಸ್ಸುಗಳನ್ನು ಮದುವೆಗಳಿಗೆ ಕೊಡುವುದು ಬೇರೆ ಬೇರೆ ಫಂಕ್ಷನ್ಸ್‌ಗೆ ಕೊಡುವುದು ಆ ಬಸ್ಸುಗಳು ಎಲ್ಲಿಂದ ಬರುತ್ತವೆ? ಒಂದೊಂದು ಡಿಪೋನಲ್ಲಿರತಕ್ಕಂಥ ಹೆಚ್ಚುವರಿ ಬಸ್ಸುಗಳನ್ನು ತೆಗೆದುಕೊಂಡು ಬಂದು ನಿನ್ನೆಯೇ ನಾವು ಪೂಲ್ ಮಾಡಿದ್ದೇವೆ. ಅಗತ್ಯ ಬಂದಾಗ, ಇಂತಹ ಪರಿಸ್ಥಿತಿ ಬಂದಾಗ ಉಪಯೋಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಕೆಟ್ಟ ಬಸ್ಸುಗಳನ್ನು

ಓಡಿಸುತ್ತಿದ್ದಿರಲ್ಲಾ ಟೈರ್ ಟ್ಯೂಬ್ ಇಲ್ಲದೆ ಆ ಬಸ್ಸುಗಳು ನಿಂತಾಗ ಈ ಬಸ್ಸುಗಳನ್ನು ಉಪಯೋಗಿಸುವುದಕ್ಕೆ ಇಟ್ಟಿದ್ದು.

ಶ್ರೀ ಸಿದ್ಧರಾಮಯ್ಯ :- ಕೆ.ಎಸ್.ಆರ್.ಟಿ.ಸಿ. ಬಗ್ಗೆ ಬೇರೆ ದಿವಸ ಚರ್ಚೆ ಮಾಡೋಣ. ಈಗ ಇರತಕ್ಕಂಥಾದ್ದು ರಾಜ್ಯದ ಜನರಿಗೆ ತೊಂದರೆ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ. ವಿದ್ಯಾರ್ಥಿಗಳಿಗೆ ಶಾಲೆಗಳಿಗೆ ಹೋಗಲು ತೊಂದರೆ ಆಗಿದೆಯೇ ಇಲ್ಲವೇ? ನಾವು ಸಾಧ್ಯವಾದ ಮಟ್ಟಿಗೆ ತೊಂದರೆ ಆಗದೇ ಇರುವಂತೆ ನೋಡಿಕೊಂಡಿದ್ದೇವೆ. ತೊಂದರೆ ಆಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ ತೊಂದರೆಯ ಪರಮಾವಧಿ ಆಗಿದೆ. ರಾಜ್ಯದಲ್ಲಿ ಗಂಭೀರವಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಸಿದ್ಧರಾಮಯ್ಯನವರು ಹಾಗೂ ಜಾಲಪ್ಪನವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದಾರೆ. ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ. ಅವರ ಹೇಳಿಕೆಯನ್ನು ಖಂಡತುಂಡಾಗಿ ಧಿಕ್ಕರಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ :- ಮಾನ್ಯ ಅಧ್ಯಕ್ಷರೇ, ನಾವು ಸರ್ಕಾರ ನಡೆಸುತ್ತಿದ್ದೇವೆ. ಇದು ಪ್ರಜಾತಂತ್ರ ಸರ್ಕಾರ. ಅದರಲ್ಲಿ ಒಂದು ಸಿಸ್ಟಂ ಇದೆ. There is method in madness in also. ದಯವಿಟ್ಟು ಅರ್ಥ ಮಾಡಿಕೊಳ್ಳಿ, ಅವರು ನಮಗೆ ಒಂದು ನೋಟೀಸ್ ಕೊಟ್ಟು ನಮಗೆ ಈ ತರಹ ತೊಂದರೆ ಆಗಿದೆ ನಾವು ನಿಮ್ಮ ಹತ್ತಿರ ಚರ್ಚೆಗೆ ಬರುತ್ತೇವೆ ನಾವು ನೀವು ಕುಳಿತು ಮಾತನಾಡೋಣ ಎಂದು ಹೇಳಬಹುದಿತ್ತು. ಅದು ಹೇಳಲಿಲ್ಲ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ಸಹಜವಾಗಿ ಪ್ರಜಾಪ್ರಭುತ್ವದಲ್ಲಿ ಸರ್ಕಾರ ತೆರಿಗೆಯನ್ನು ಹಾಕತಕ್ಕಂಥಾದ್ದು, ಕಡಿಮೆ ಮಾಡತಕ್ಕಂಥಾದ್ದು ಸ್ಟ್ರಕ್ಚರ್ ಆಫ್ ಟ್ಯಾಕ್ಸೇಷನ್ ಅದು ಸರ್ಕಾರಕ್ಕೆ ಇರತಕ್ಕಂಥ ಅಧಿಕಾರ. ಅದರ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ see the Motor Vehicles Taxation Act

ಎಷ್ಟು ಟ್ಯಾಕ್ಸ್ ನಾವು ಹಾಕಿದ್ದೇವೆ. ಈಗ ಸಿದ್ಧ ಉಡುಪುಗಳು. ಇದಕ್ಕೆ ಇಷ್ಟು ಟ್ಯಾಕ್ಸ್

ಹಾಕುತ್ತೇವೆ. ಗೋಧಿ ಹಿಟ್ಟು, ರವೆ ಮೇಲೆ ಇಷ್ಟು ಹಾಕುತ್ತೇವೆ. ಅಂದ ತಕ್ಷಣ ಟ್ಯಾಕ್ಸನ್ನು ಬಿಟ್ಟು ಬಿಡುವುದಿಲ್ಲ. ಅದೇ ರೀತಿಯಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್ ಹಾಕಲು ಆಕ್ಟ್ ಇದೆ. ಅಂದ ತಕ್ಷಣ ಈ ಚಾರ್ಜಸ್ ಜಾಸ್ತಿ ಆಗಿ ಹೋಗುವುದಿಲ್ಲ. ನಾನು ಒಂದೇ ಒಂದು ಮಾತು ಹೇಳುವುದು. There are two stages. This is a proposal of taxation which you have made in your Budget Speech. It is for you to continue with it or reduce it.

ಇವೆಲ್ಲಾ ಕೂಡ ಇದ್ದಾವೆ ಆದರಲ್ಲಿ. ಇವೆಲ್ಲಾ ಸಲಹೆ ಇದ್ದಾವೆ. ಆದರೆ ಅವರು ಹೇಳುವುದು ತೆರಿಗೆ ಹಾಕಿಬಿಟ್ಟರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥಾದ್ದು. ಸಹಜವಾಗಿ ಖಾಸಗಿ ವಲಯದಲ್ಲಿರತಕ್ಕಂಥ ನಾನ್ ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಓಡತಕ್ಕಂಥ ಬಸ್ಸುಗಳು ಅವು ಏನೂ ಕಡಿಮೆ ಇಲ್ಲ. ತಾವು 56 ಜಿಲ್ಲೆಗಳು ಎಂದು ಸುಲಭವಾಗಿ ಹೇಳಿಬಿಡುತ್ತೀರಿ. ಪ್ರತಿ 5 ನಿಮಿಷಕ್ಕೆ ಒಂದು ಬಸ್ಸು ಓಡುವುದನ್ನು ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಡಬಹುದು. ಉಡುಪಿ ಮಂಗಳೂರು ಕಡೆ ಎರಡು ನಿಮಿಷ ಒಂದು ನಿಮಿಷಕ್ಕೆ ಒಂದರಂತೆ ಬಸ್ಸುಗಳು ಓಡಾಡುತ್ತವೆ. ಅದಕ್ಕೆ ಏನು ಮಾಡಬೇಕು? ಒಂದು ಸಾರಿ ಹಾಗೆ ಬಂದಾಗ, ತೊಂದರೆಯಲ್ಲಿ ಇರಬಹುದೆಂದು ಸರ್ಕಾರ ಮನಗಾಣಬೇಕಾಗುತ್ತದೆ. ಎಷ್ಟು ಹಾಕಬೇಕೆನ್ನು ಪ್ರಶ್ನೆ ಚರ್ಚಾಸ್ಪದವಾದ ವಿಚಾರ. ಅದಕ್ಕೆ ಅಮೆಂಡ್‌ಮೆಂಟ್ ತರುವುದಕ್ಕೆ ತೊಂದರೆ ಆಗುತ್ತದಲ್ಲಾ ಎಂದು ಅವರು ಈಗಲೇ ವಿರೋಧ ಮಾಡುತ್ತಿದ್ದಾರೆ. ರೈಸ್ ಮಾಡುತ್ತೇವೆಂದು ಹೇಳಿದ ತಕ್ಷಣ ಅದನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ ರೂಲ್ಸ್ ಪ್ರಕಾರ. ಅದಕ್ಕೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಇಲ್ಲವೆಂದರೆ ಮಾಡುವುದಕ್ಕೆ ಬರುವುದಿಲ್ಲ. ಟ್ಯಾಕ್ಸೇಷನ್ ಬಿಲ್ ಇಲ್ಲಿ ತಂದು ಪಾಸ್ ಮಾಡಬೇಕು. If the Legislature is not in Session, you will have to bring an ordinance.

ಶ್ರೀ ಕೆ.ಎನ್.ನಾಗೇಗೌಡ :- ನಾವು ಇಲ್ಲಿ ಬಜೆಟ್ಟನ್ನು ಮಂಡಿಸಿದ್ದೇವೆ. ಬಜೆಟ್ ಮೇಲೆ ಚರ್ಚೆಯಾಗುತ್ತಿದೆ. ಅಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಈ ಸ್ಟೇಜ್‌ನಲ್ಲಿ ಯಾವ ರೀತಿ ಮಾಡಬಹುದು? ತಾವೂ ಫೈನಾನ್ಸ್ ಮಿನಿಸ್ಟರ್ ಆಗಿದ್ದೀರಿ, ಮುಖ್ಯ ಮಂತ್ರಿ ಆಗಿದ್ದೀರಿ. ತಾವು ಬಜೆಟ್ ಮೇಲೆ ಚರ್ಚೆ ಮಾಡಿದ್ದೀರಿ, ಮಾನ್ಯ ಮೊಯಿಲಿಯವರೂ ಬಜೆಟ್ ಮೇಲೆ ಚರ್ಚೆ ಮಾಡಿದ್ದಾರೆ, ಇನ್ನೂ ಕಾನ್ಸ್ಟ್ಟ್ಯೂಷನ್ ಪ್ರಕಾರ ಬಜೆಟ್ ಹೌಸ್‌ನಲ್ಲಿ ಪಾಸ್ ಆಗಿಲ್ಲ, ಗೌರ್ನಮೆಂಟದ್ದು ರಿಪ್ಲೈ ಕೂಡ ಆಗಿಲ್ಲ. ಈ ಮಧ್ಯೆ ಅವರು ಸ್ಟ್ರೈಕ್ ಮಾಡಿದರೆಂದು ಗೌರ್ನಮೆಂಟ್ ಯೀಲ್ಡ್ ಆದರೆ ಹೇಗೆ? ಈ ಸ್ಟೇಜ್‌ನಲ್ಲಿ ಗೌರ್ನಮೆಂಟ್ ರೀ-ಆಕ್ಷನ್ ಮಾಡುವುದಕ್ಕೆ ಬರುತ್ತದೆಯೇ?

ಶ್ರೀ ಎಸ್.ಬಂಗಾರಪ್ಪ :- ಅದಕ್ಕೆ ನಾನು ಹೇಳಿದ್ದು, ಟ್ಯಾಕ್ಸನ್ನು ಹಾಕುವುದಕ್ಕೆ ಹೇಗೆ ಸ್ಟೇಜಸ್ ಇದೆಯೋ ಹಾಗೆಯೇ ತೀರ್ಮಾನ ಮಾಡುವುದಕ್ಕೂ ಸ್ಟೇಜಸ್ ಇವೆ. ಮಾನ್ಯ ಸದಸ್ಯರಾದ ನಾಗೇಗೌಡರ ಗಮನಕ್ಕೆ ತರುವುದಾದರೆ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬಗ್ಗೆ ಈಗಲೇ ಬೇಕಾದರೂ ಹೇಳುವುದಕ್ಕೆ ಬರುತ್ತದೆ. ಅದನ್ನು ಹೇಳಿ ಅಮೆಂಡ್‌ಮೆಂಟ್ ತರತಕ್ಕಂಥ ಕಾಲದಲ್ಲಿ ಬದಲಾವಣೆ ಮಾಡಿಕೊಳ್ಳಬಹುದು.

ಶ್ರೀ ಕೆ.ಎನ್.ನಾಗೇಗೌಡ :- ಮಾನ್ಯ ಬಂಗಾರಪ್ಪನವರು ಕಾನ್ಸ್ಟ್ಟ್ಯೂಷನ್ ಪಾಯಿಂಟನ್ನು ಫೈನಾನ್ಸ್ ಮ್ಯಾಟರ್‌ನಲ್ಲಿ ರೈಸ್ ಮಾಡಿದರು. ರಿಪ್ಲೈ ಮಾಡುವಾಗ ಗೌರ್ನಮೆಂಟ್ ಸ್ಟ್ಯಾಂಡ್ ಬರಬೇಕೆ ವಿನಃ ಡಿಬೇಟ್ ಸಮಯದಲ್ಲಿ ಟ್ಯಾಕ್ಸ್ ಬಗ್ಗೆ ತೀರ್ಮಾನ ಹೇಳುವುದಕ್ಕೆ ಬರುವುದಿಲ್ಲ.

SRI S.BANGARAPPA :- Any time, under the Constitution, the Government has got powers to accept or reject or modify the tax structure. There is a law. You verify it from the Law Department.

ತಮಗೆ ಅನುಮಾನ ಬೇಕಾಗಿಲ್ಲ. ತಮಗೆ ಬೇಕಾದರೆ ಲಾ ಡಿಪಾರ್ಟಮೆಂಟಿನಲ್ಲಿ ವೆರಿಫೈ ಮಾಡಿಸಿ. In debate stage also, you can do it.

ಶ್ರೀ ಕೆ.ಎನ್.ನಾಗೇಗೌಡ :- ಅದು ಗೌರ್ನಮೆಂಟ್ ಪ್ರೆಸ್ಟೀಜ್ ಅಲ್ಲವೇ?

ಶ್ರೀ ಎಸ್.ಬಂಗಾರಪ್ಪ :- ಆಮೇಲೆ, ಎಲ್ಲಾ ಶಾಂತಿಯುತವಾಗಿದೆ, ಯಾವುದೇ ಅಹಿತಕರ ಘಟನೆ ನಡೆದಿಲ್ಲವೆಂದು ಹೇಳಲಾಗಿದೆ. ಅಶಾಂತಿ ಆಗುವವರೆಗೂ ಅಲ್ಲಿ ಶಾಂತಿ ಇದ್ದೇ ಇರುತ್ತದೆ, ಘಟನೆ ನಡೆಯುವವರೆಗೂ ಅಲ್ಲಿ ಘಟನೆ ನಡೆದೇ ಇರುವುದಿಲ್ಲ. Better you avoid all those things because lot of reaction I see in all those areas.

ನನಗೆ ಆಗಲೆ ಕೆಲವು ಟೆಲಿಫೋನ್ ಕಾಲ್ಸ್ ಬಂದಿದ್ದವು. ಜೊತೆಗೆ ಲೋಕಲ್‌ನವರು ಪತ್ರವನ್ನೂ ತಂದು ಕೊಟ್ಟಿದ್ದರು, ಅದನ್ನು ಅಲ್ಲೇ ಬಿಟ್ಟು ಬಂದಿದ್ದೇನೆ. ಅದನ್ನು ತಮಗೆ ನಂತರ ಕೊಡುತ್ತೇನೆ. ನಾನು ಏಕೆ ಹೇಳುತ್ತೇನೆಂದರೆ, ಮಾತುಕತೆಗಳನ್ನು ಮಾಡುವುದರಲ್ಲಿ ಎರಡು ರೀತಿ ಇರುತ್ತದೆ. ಒಂದನೆಯದು, ತಾವು ಅವರನ್ನು ಮಾತುಕತೆಗೆ ಕರೆಯಬಹುದು ಇನ್ನೊಂದು ಅವರಾಗಿಯೇ ಮಾತುಕತೆಗೆ ಬರುವುದು. ಸರ್ಕಾರಕ್ಕಿಂತ ಯಾರೂ ದೊಡ್ಡವರು ಆಗಲಿಕ್ಕೆ ಸಾಧ್ಯವಿಲ್ಲ; ಅವರಾಗಿಯೇ ಸರ್ಕಾರದ ಜೊತೆಗೆ ಮಾತುಕತೆಗೆ

ಬರಬಹುದು. ಆದರೆ, ಸರ್ಕಾರದವರೇ ಮೊದಲು ಮಾತುಕತೆಗೆ ಕರೆದರೆ ಅದು ಸೌಜನ್ಯದ ಗುಣ ವಿಶೇಷಗಳಾಗುತ್ತದೆ. ಆದ್ದರಿಂದ ನಿಮ್ಮ ಟ್ರಾನ್ಸ್‌ಪೋರ್ಟ್ ಕಮಿಷನರ್ ಮತ್ತು ಸೆಕ್ರೆಟರಿಯವರಿಗೆ ತಿಳಿಸಿ ತಕ್ಷಣ ಅವರ ಅಸೋಸಿಯೇಷನ್‌ಗೆ ಕರೆ ಕೊಟ್ಟು ಮಾತುಕತೆಗೆ ಆಹ್ವಾನ ಮಾಡಿ ಟ್ಯಾಕ್ಸೇಷನ್ ಬಿಲ್ ಅಮೆಂಡ್‌ಮೆಂಟ್ ಆದ ಮೇಲೆ ಅದನ್ನು ಜಾರಿಗೆ ಕೊಡುವುದು ಈಗ ಅಲ್ಲ ಎಂದು ಅವರಿಗೆ ತಿಳಿ ಹೇಳಿ. If you agree to their suggestion, you can reduce the tax or keep the same rate which is in force now. There is nothing wrong. Better you do that.

ಅವರು ಮಾತುಕತೆಗೆ ಬಂದಿದ್ದರೂ ಸರ್ಕಾರ ಅವರನ್ನು ಕರೆಯಿಸಿದರೆ, ಅದು ಸರ್ಕಾರದ ವಿಶಾಲ ಹೃದಿಯವನ್ನು ತೋರಿಸುತ್ತದೆ. ಇದು ನನ್ನ ಸಲಹೆ. ಇಲ್ಲ, ನಾವು ಇದಕ್ಕೇ ಸ್ಟಿಕ್ ಆನ್ ಆಗುತ್ತೇವೆಂದು ಹೇಳುವುದು ಸರಿಯಲ್ಲ. ಒಂದು ಪಕ್ಷ ಆ ತರಹ ಮನೋಭಾವ ಇದ್ದರೆ ಅದನ್ನು ಅವಾಯ್ಡ್ ಮಾಡುವುದು ಒಳ್ಳೆಯದು. ಮಾತುಕತೆಗೆ ಕರೆಯೋಣ ಎನ್ನುವ ಮನಸ್ಸು ಇದ್ದರೆ ಅವರನ್ನು ತಕ್ಷಣ ಕರೆದು ಮಾತನಾಡಿ.

ಶ್ರೀ ಆರ್.ಎಲ್.ಜಾಲಪ್ಪ :- ಮಾನ್ಯ ಅಧ್ಯಕ್ಷರೇ, ಬಹಳಷ್ಟು ಖಾಸಗೀ ಬಸ್‌ನವರು ಹಳ್ಳಿಗಳ ಕಡೆ ಓಡಿಸುವುದಕ್ಕೆ ಪರ್ಮಿಟ್ ತೆಗೆದುಕೊಂಡು ನ್ಯಾಷನಲೈಸ್ಡ್ ಆಗಿರುವ ರೂಟ್‌ಗಳಲ್ಲೆ ಓಡಿಸುತ್ತಿದ್ದಾರೆ, ಆದರೂ ಅವರಿಗೆ ನಾವು ಅಡ್ಡಿಪಡಿಸಿಲ್ಲ. 60 ಸೀಟು ಇರುವ ಕಡೆ 180 ಸೀಟು ಹಾಕಿದರೂ ನಾವು ಅಡ್ಡಿ ಮಾಡಿಲ್ಲ. ಜನಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಓವರ್ ಲೋಡ್ ಹಾಕಿದರೂ ನಾವು ಕೇಸ್ ಹಾಕುತ್ತಿಲ್ಲ. ಪ್ರಶ್ನೆ ಇಷ್ಟೇ, ಈ ಮನೆಯಲ್ಲಿ ಬಜೆಟ್ ಮೇಲೆ ಪೂರ್ಣ ಚರ್ಚೆಯಾಗಿಲ್ಲ ಹಾಗೂ ಬಜೆಟ್ ಮೇಲೆ ವೋಟ್ ನಡೆದಿಲ್ಲ, ಈಗ ಪ್ರಪೋಸಲ್ ಇಟ್ಟಿದ್ದೇವೆ, ಇವರಿಗೆ ಮಾತ್ರ ಅಲ್ಲ ಬೇರೆಯವರಿಗೂ ಟ್ಯಾಕ್ಸ್ ಜಾಸ್ತಿ ಮಾಡಿದ್ದೇವೆ, ಎಲ್ಲರೂ ಹೀಗೆ ಸ್ಟೈಕ್ ಮಾಡಿದರೆ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆಯೇ? ಮಾನ್ಯ ಬಂಗಾರಪ್ಪನವರು ಬಹಳ ಎಫೆಕ್ಟೀವ್ ಆಗಿ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಯಾರಾದರೂ ಸ್ಟೈಕ್ ಮಾಡಬೇಕಾದರೆ 8 ದಿವಸ ಮೊದಲು ನೋಟೀಸ್ ಕೊಡಬೇಕೋ ಬೇಡವೋ? ನಮಗೆ ಅನಾನುಕೂಲವಾಗುತ್ತದೆ, ಅದನ್ನು ಸರಿಪಡಿಸದಿದ್ದರೆ ನಾವು ಸ್ಟೈಕ್ ಮಾಡಬೇಕಾಗುತ್ತದೆಂದು ಮೊದಲು ನೋಟೀಸ್ ಕೊಡಬೇಕಾಗುತ್ತದೆ. ಬಸ್ ಮಾಲೀಕರ ಅಸೋಸಿಯೇಷನ್ ಇದೆ ಎಂದು ನಮಗೆ ಗೊತ್ತೇ ಇರಲಿಲ್ಲ. ಜಾಸ್ತಿ ಟ್ಯಾಕ್ಸ್ ಮಾಡಿದರೆ ನಮಗೆ ಏನೂ ಗಿಟ್ಟುವುದಿಲ್ಲವೆಂದು ಅಸೋಸಿಯೇಷನ್‌ನವರು ಬಂದು ನಮಗೆ ಹೇಳಬೇಕಾಗಿತ್ತು. Let them convince the Government. We have not shut out ourselves from discussion. They

are wel-come to discuss the matter with the Government.

ಅದಿಲ್ಲದೆ ಏಕ್‌ದಂ ಸ್ಟೈಕ್ ಮಾಡಿದರೆ ಹೇಗೆ? ಯಾವ ಜನ ಪ್ರತಿ ದಿನ ಹಣವನ್ನು ಸುರಿದು ಬಸ್‌ಗಳ ಟಾಪ್ ಮೇಲೆ ಪ್ರಯಾಣ ಮಾಡುತ್ತಿದ್ದರೋ ಅವರ ಅನುಕೂಲವನ್ನಾದರೂ ಇವರು ನೋಡಬೇಕಲ್ಲಾ? ಅದು ಬಿಟ್ಟು ದಿಢೀರ್ ಎಂದು ಮುಷ್ಕರ ಮಾಡಿದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶವಿಲ್ಲ, ಅವರು ಬಂದರೆ ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಯು.ಆರ್.ಸಭಾಪತಿ :- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 3 ಸಾವಿರ ಖಾಸಗೀ ಬಸ್‌ಗಳ ಒಂದು ಸಂಘಟನೆ ಇದೆ. ಅವರು 2 ತಿಂಗಳ ಹಿಂದೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಅದರಲ್ಲಿ ಏನು ತಿಳೀದ್ದಾರೆಂದರೆ, ಮಳೆ ಮತ್ತು ಪ್ರಕೃತಿ ಏಕೋಪದಿಂದ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ರಸ್ತೆಗಳು ಹಾನಿಯಾಗಿವೆ, ರಸ್ತೆಗಳಲ್ಲಿ ಬಸ್‌ಗಳನ್ನು ಓಡಿಸುವುದಕಾಗುತ್ತಿಲ್ಲ, ಈ ರೀತಿ ಪರಿಸ್ಥಿತಿ ಇರುವಾಗ ಕೆ.ಎಸ್.ಆರ್.ಟಿ.ಸಿ.ಗೆ ಸಿಗುವಂಥ ಫೆಸಿಲಿಟಿ ನಮಗೆ ಸಿಗುತ್ತಿಲ್ಲವಾದ್ದರಿಂದ ಇದನ್ನು ಸರಿಪಡಿಸಬೇಕು ಎನ್ನುವ ಮನವಿಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಅದರ ಕಾಪಿಯನ್ನು ನನಗೂ ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ಜಿಲ್ಲಾಧಿಕಾರಿಯವರು ಸಹ ಅವರನ್ನು ಕರೆಸಿ ಸಭೆ ನಡೆಸಿ ಮಾತನಾಡಿರುವಾಗ ಸನ್ಮಾನ್ಯ ಸಚಿವರು ಅಸೋಸಿಯೇಷನ್ ಇಲ್ಲವೆಂದು ಹೇಳಿದರೆ ನನಗೆ ಆಶ್ಚರ್ಯವೆನಿಸುತ್ತದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಸಾವಿರ ಬಸ್‌ಗಳ ಜೊತೆಗೆ ಸಿಟಿ ಬಸ್‌ಗಳು ಕೂಡ ಮುಷ್ಕರದಿಂದ ನಿಂತಿವೆ. ಪೇಷೆಂಟ್‌ಗಳು ಹೋಗಬೇಕಾದರೆ ಇವತ್ತು ಖಾಸಗಿ ಬಸ್‌ಗಳೂ ಇಲ್ಲ, ಸಿಟಿ ಸರ್ವಿಸ್ ಬಸ್‌ಗಳೂ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆ ಇಡೀ ಬಂದ್ ಆಗಿದೆ. ಅದೇ ರೀತಿ ಬೇರೆ ಜಿಲ್ಲೆಗಳ ಪರಿಸ್ಥಿತಿಯೂ ಇದೇ ರೀತಿ ಇದೆ. ಹೀಗಿರುವಾಗ ಅವರು ಮನವಿ ಕೊಡಲಿಲ್ಲ, ಅಂತಹ ಅಸೋಸಿಯೇಷನ್ ಇಲ್ಲವೆಂದು ಬೇಜವಾಬ್ದಾರಿಯ ಮಾತನ್ನು ಸರ್ಕಾರದವರು ಹೇಳಬಾರದು. ಅವರು ಮನವಿ ಕೊಟ್ಟಿಲ್ಲವೆಂದು ಹೇಳುವುದು ತಪ್ಪು.

ಶ್ರೀ ಆರ್.ಎಲ್.ಜಾಲಪ್ಪ :- ಈ ಸಭೆಗೆ ಅವರು ಹೊಸದಾಗಿ ಬಂದಿದ್ದಾರೆ, ಅವರು ನಾಲಿಗೆ ಉದ್ದ ಮಾಡುವುದು ಬೇಡ. ನಾವು ಬೇಜವಾಬ್ದಾರಿತನದಿಂದ ಹೇಳಿಲ್ಲ. ಯಾರೇ ಆಗಲೀ ನೋಟೀಸ್ ಕೊಡದೆ ಸ್ಟೈಕ್ ಮಾಡಿರುವುದು ಅವರ ಬೇಜವಾಬ್ದಾರಿತನ ಅಲ್ಲವೇ?

ಶ್ರೀ ಯು.ಆರ್.ಸಭಾಪತಿ :- ಅಸೋಸಿಯೇಷನ್ ಇಲ್ಲವೆಂದು ತಾವು

ಹೇಳಿದಿರಲ್ಲ?

ಶ್ರೀ ಆರ್.ಎಲ್.ಜಾಲಪ್ಪ :-ಮಂಡ್ಯ, ಮೈಸೂರು ಕಡೆ ಅಂತಹ ಅಸೋಸಿಯೇಷನ್ ಇರಲಿಲ್ಲ. ನಮಗೇನೂ ಗೊತ್ತಿಲ್ಲವೇ ಅದು?

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ಬಹಳ ಸ್ಪಷ್ಟವಾಗಿ ನಾವು ಎರಡು ಮೂರು ಸಾರಿ ಹೇಳಿದ್ದೇವೆ. ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದಂಥವರು, ಸರ್ಕಾರ ನಡೆಸಿರುವಂಥವರು, ಅವರು ಶಾಸಕರಾಗಿ - ಮಂತ್ರಿಗಳಾಗಿ ಈ ಸದನದಲ್ಲಿ ದೀರ್ಘ ಕಾಲ ಕೆಲಸ ಮಾಡಿದ್ದಾರೆ. ಈಗ ಸರ್ಕಾರ ತೆರಿಗೆಯನ್ನು ಪ್ರಸ್ತಾಪ ಮಾಡಿದೆ. ಈಗಲೇ ತೆರಿಗೆ ಕೊಡಬೇಕಾದವರು ಚಳುವಳಿಯನ್ನು ಎಲ್ಲಾ ಕಡೆ ಪ್ರಾರಂಭ ಮಾಡಿದರೆ ಸರ್ಕಾರವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ತೆರಿಗೆ ಜಾಸ್ತಿ ಮಾಡಿದ ಕೂಡಲೇ ಎಲ್ಲರೂ ಚಳುವಳಿ ಮಾಡುವುದಕ್ಕೆ ಹೊರಡುತ್ತಾರೆ. ಹಾಗೆ ಆದರೆ ಸರಕಾರ ನಡೆಸುವುದು ಕಷ್ಟವಾಗುತ್ತದೆ. ನಾನು ನಿನ್ನೆ ಕೂಡ ಹೇಳಿದ್ದೇನೆ. ಈ ತರಹ ಏಕಾಏಕಿಯಾಗಿ ಮಾಡಬಾರದು. ಈಗ ತೆರಿಗೆ ಜಾರಿಗೆ ಬಂದಿಲ್ಲ. ಅದಕ್ಕೆ ಬಿಲ್ ಬರಬೇಕು, ಅಮೆಂಡ್ ಆಗಬೇಕು, ಅದು ಈ ಸಭೆಯಲ್ಲಿ ಪಾಸ್ ಆಗಬೇಕು, ಅದು ಅನಂತರ ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುವುದು. ಇವೊತ್ತು ಚಳುವಳಿಗೆ ಹೋಗತಕ್ಕಂಥವರ ಉದ್ದೇಶವನ್ನು ಕೂಡ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪದೇ ಪದೇ ನಾನು ಹೇಳುವುದೇನೆಂದರೆ ಅವರು ಇದನ್ನು ಪ್ರೆಸ್ಟೀಜ್ ಮಾಡಿಕೊಂಡು ನಾವು ಸರಕಾರವನ್ನು ಭೇಟಿ ಮಾಡುವುದಿಲ್ಲ, ಎಂದು ಹೇಳಿ ಆ ತರಹದಲ್ಲಿ ಆಗುವ ಅಗತ್ಯವಿಲ್ಲ. ತಮ್ಮ ಮೂಲಕ ಅವರಿಗೆ ಹೇಳುವುದೇನೆಂದರೆ ಅವರು ಸರಕಾರದ ಜೊತೆಗೆ ಬಂದು ಮಾತನಾಡಲಿ. ಸಭಾಪತಿಯವರು ಅವರ ಪರವಾಗಿ ಮಾತನಾಡಿದ್ದಾರೆ. ಅವರೇ ಅವರಿಗೆ ಬರುವಂತೆ ಹೇಳಿ ಕಳುಹಿಸಲು. ಅವರ ಪರವಾಗಿ ಇಷ್ಟೊಂದು ಜನರು ವಕಾಲತ್ತನ್ನು ಮಾಡಿದ್ದಾರಲ್ಲಾ, ಅವರು ಬಂದು ಮಾತನಾಡಲಿ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಹೇಳಬಯಸುತ್ತೇನೆ. ಇಲ್ಲಿ ನೀವು ಮಾತುಕತೆಗೆ ಸಿದ್ಧವಾಗಿದ್ದೀರಿ. ಬಂದು ಮಾತನಾಡಲಿ ಎನ್ನುವುದು ಒಂದು ತರಹದ ಉತ್ತರವಾದರೆ ಇನ್ನೊಂದು ಕರೆದು ಮಾತನಾಡುವುದು. ನಾನು ಸಲಹೆ ಕೊಟ್ಟಿರುವುದು ಅವರಾಗಿ ಬಂದು ಮಾತನಾಡಬಹುದು. ಅಥವಾ ಸರಕಾರದವರು ಕರೆದು ಕೂಡ ಮಾತನಾಡಬಹುದು. ಇಲ್ಲಿ ಅವರು ಬರಲಿಲ್ಲ ಎನ್ನುವ ಪ್ರಶ್ನೆ ಅಲ್ಲ. ಬಹುಶಃ ತತ್‌ಕ್ಷಣದಿಂದ ಈ ತೆರಿಗೆಯನ್ನು ನೀವು ಜಾರಿಗೆ ಕೊಟ್ಟರೆ ನಾಳೆ ತಮಗೆ ತೊಂದರೆ ಬರಬಹುದೆಂಬ ಆತಂಕವು ಅವರ ಮನಸ್ಸಿನಲ್ಲಿದೆ ಎಂದು ನನಗೆ ಕಾಣುತ್ತದೆ. ಆ ದೃಷ್ಟಿಯಿಂದ ನೀವು ಒಂದು ಮೆಸೇಜ್ ಕೊಟ್ಟು ಕಳುಹಿಸಿ, ಅವರು ಬರಲಿ.

ನಾನು ಆ ಜಾಗದಲ್ಲಿದ್ದರೆ ಅದೇ ತರಹ ಮಾಡುತ್ತಿದ್ದೆ. ಮಾನ್ಯ ಸದಸ್ಯರು ಯಾರಾದರೂ ಕೇಳಿದ್ದರೆ ನಾನೇ ಕರೆಯಿಸುತ್ತೇನೆ ಎಂದು ಹೇಳುತ್ತಿದ್ದೆ. I don't know, why you stand on prestige.

ಅದು ಒಳ್ಳೆಯದಲ್ಲ. ಕರೆಯಿಸಿ ಎಂದು ಹೇಳಿದಾಗ ಕರೆಯಿಸುತ್ತೇವೆಂದು ಹೇಳಿ, ಅದರಲ್ಲಿ ತಪ್ಪು ಏನಿದೆ? ಅದನ್ನು ಬಿಟ್ಟು ಅವರು ಬರಲಿ ಎಂದು ಹೇಳುವ ಭಾವನೆಯು ಸರಿಯಲ್ಲ. ಅದಕ್ಕಾಗಿ ನೀವು ಅವರನ್ನು ಕರೆಯಿಸುತ್ತೀರೋ ಇಲ್ಲವೋ ಎಂಬ ವಿಚಾರ ಬೇಕು. ನಿಮ್ಮ ಆದೇಶವನ್ನು ಅವರು ಆತುರದಿಂದ ಕಾಯುತ್ತಿರಬಹುದು. ಬಹುಶಃ ಕೆನರಾ ಮೋಟಾರ್ ಅಸೋಸಿಯೇಷನ್ ಅಥವಾ ಬೇರೊಂದು ಇರಬಹುದು. ಅನೇಕ ಜಿಲ್ಲೆಗಳಲ್ಲಿ ಅಂಥ ಅಸೋಸಿಯೇಷನ್‌ಗಳು ಇವೆ.

ಶ್ರೀ ಆರ್.ಎಲ್.ಜಾಲಪ್ಪ :- ಕೆನರಾ ಬಸ್ ಅಸೋಸಿಯೇಷನ್ ನವರು ಅಲ್ಲಿ ರಸ್ತೆಗಳು ಸರಿಯಾಗಿ ಇಲ್ಲ ಎಂಬ ಕಾರಣಕ್ಕಾಗಿ ಮುಷ್ಕರ ಮಾಡುತ್ತಿದ್ದಾರೆ ಎಂದು ಸಭಾಪತಿಯವರು ಹೇಳಿದ್ದರು. ಅಲ್ಲಿ ರಸ್ತೆಗಳು ಚೆನ್ನಾಗಿಲ್ಲ. ಕೆ.ಎಸ್.ಆರ್.ಟಿ.ಸಿ.ಗೆ ಯಾವ ರೀತಿಯಲ್ಲಿ ಅನುಕೂಲ ಮಾಡಿಕೊಡುತ್ತಿದ್ದೀರಿ ಅದೇ ತರಹದಲ್ಲಿ ನಮಗೂ ಮಾಡಿಕೊಡಿ ಎಂದು ಹೇಳಿದ್ದಾರೆ. ನೀವು ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ ಎಂದು ಅವರು ಹೇಳಿಲ್ಲ.

ಶ್ರೀ ಯು.ಆರ್.ಸಭಾಪತಿ :- ಅವರು ಮುಷ್ಕರ ಹೂಡಿದ್ದಕ್ಕೆ ಅದೂ ಒಂದು ಕಾರಣ ಮಾತ್ರ ಎಂದು ಹೇಳಿದ್ದೇನೆ. ಟ್ಯಾಕ್ಸ್ ಹೆಚ್ಚು ಮಾಡಿದ ಬಗ್ಗೆ ಇರುವುದು ಮುಖ್ಯ ಕಾರಣ. ಈ ಬಗ್ಗೆ ನೀವು ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್.ಬಂಗಾರಪ್ಪ :- ಆಲ್ಲಿನ ರಸ್ತೆಗಳ ದುಸ್ಥಿತಿಯಿಂದಾಗ ಟೈರ್‌ಗಳು ಹಾಳಾಗುತ್ತವೆ ಮತ್ತು ಪರ್ ಸೀಟ್ ಟ್ಯಾಕ್ಸ್ ಜಾಸ್ತಿ ಏನು ಮಾಡಿದ್ದೀರಿ ಅದೂ ಕೂಡ ಜಾಸ್ತಿಯಾಗುತ್ತದೆ ಎಂದು ಅಭಿಪ್ರಾಯದಿಂದ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈಗ ನೀವು ಅವರನ್ನು ಕರೆದು ಮಾತನಾಡತಕ್ಕಂಥಾದ್ದು ಸರಕಾರದ ಸೌಜನ್ಯತೆಗೆ ಸಂಬಂಧಪಟ್ಟ ವಿಚಾರವಾಗಿದೆ. ಇಲ್ಲ, ನಾನು ಈ ಸದನದ ಮುಖಾಂತರ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದರೂ ಕೂಡ Why don't you tell your Transport Secretary and send a message? There is nothing wront.

ಶ್ರೀ ಸಿದ್ಧರಾಮಯ್ಯ :- ಸರಕಾರಕ್ಕೆ ಟ್ಯಾಕ್ಸ್ ಕೊಡತಕ್ಕಂಥ ಬೇರೆ ಬೇರೆ ಗುಂಪಿನವರು

ಇದ್ದಾರೆ. ಬೇರೆ ಬೇರೆ ಭಾಗಗಳಲ್ಲಿ ಟ್ಯಾಕ್ಸನ್ನು ಹೆಚ್ಚು, ಕಡಿಮೆ ಮಾಡತಕ್ಕಂಥಾದ್ದು ಇದೆ. ಅಂಥ ಬೇರೆ ಬೇರೆ ಪ್ರಸ್ತಾವಗಳಿದ್ದಾವೆ. ಇದಕ್ಕೆ ಪ್ರತಿಭಟನೆ ಮಾಡುತ್ತೇವೆ ಎಂದು ಬೇರೆ ಬೇರೆ ಅಸೋಸಿಯೇಷನ್‌ಗಳವರು ಹೇಳುತ್ತಾರೆ. ಇವೊತ್ತು ಬ್ರೆಡ್, ಸೋಜಿ, ರವೆ, ಮೈದಾ - ಮುಂತಾಗಿ ವಹಿವಾಟು ಮಾಡುವವರೂ ಕೂಡ ಹೇಳಿದ್ದಾರೆ. ಸರ್ಕಾರ ಈ ರೀತಿಯಲ್ಲಿ ನಾವು ಪ್ರತಿಭಟನೆ ಮಾಡುತ್ತೇವೆಂದು ಎಲ್ಲಾ ಜನರೂ ಹೇಳುತ್ತಾ ಇದ್ದರೆ ಯಾರೇ ಆಗಲಿ ಸರಕಾರವನ್ನು ನಡೆಸಲು ಸಾಧ್ಯವೇ ಎಂಬುದನ್ನು ಹೇಳಿ. ಒಂದು ವೇಳೆ ಅವರಿಗೆ ಅನ್ಯಾಯವಾಗುತ್ತದೆ ಎಂದು ಇದ್ದರೆ ಅವರು ಬಂದು ಸರಕಾರದ ಜೊತೆಗೆ ಚರ್ಚೆ ಮಾಡಬಹುದು. ಒಂದು ತೀರ್ಮಾನಕ್ಕೆ ಬರಲು ಅದು ಸಹಾಯವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ :- ಇವೊತ್ತು ಸೋಜಿ, ರವೆ, ಮೈದಾ ಹಿಟ್ಟು ಇತ್ಯಾದಿಗಳ ವಿಚಾರವೇ ಬೇರೆ. ಇದು ಹಾಗೆ ಆಗುವುದಿಲ್ಲ. ಪರೀಕ್ಷೆಯ ಸಮಯದಲ್ಲಿ ಹೀಗೆ ಆದರೆ ಕಷ್ಟವಾಗುತ್ತದೆ. ಈಗ ನೀವು ಅವರನ್ನು ಕರೆಯತಕ್ಕಂಥ ಸೌಜನ್ಯವನ್ನು ತೋರಿಸುತ್ತಾ ಇಲ್ಲ. ಹಿಂದೆಯೂ ಕೂಡ ಎಷ್ಟೋ ಇಂಥ ಸಂದರ್ಭಗಳು ಬಂದಾಗ ಮಾಡಿದ್ದೇವೆ, ಹೆಚ್ಚು ಕಡಿಮೆ ಮಾಡಿಕೊಟ್ಟಿದ್ದೇವೆ. ಅಂಥ ಪರಿಸ್ಥಿತಿಯಲ್ಲಿ ಸಂಬಂಧಪಟ್ಟ ಸಂಘದವರು ಬಂದಾಗ ಮಾಡಿಕೊಟ್ಟಿದ್ದೇವೆ. ಈಗ ನೀವು ಅಂಥ ಸಂದರ್ಭ ಇದ್ದಾಗ ಕರೆದು ಮಾತನಾಡಬಹುದು....

ಶ್ರೀಆರ್.ಎಲ್. ಜಾಲಪ್ಪ :- ಈಗ ನೀವು ಹೇಳಬೇಕಾದುದನ್ನು ಹೇಳಿದ್ದೀರಿ. ಅದನ್ನು ಇಲ್ಲಿಗೆ ಮುಗಿಸೋಣ. ನಾಳೆ ಚರ್ಚೆಗೆ ಉತ್ತರ ಕೊಡಬೇಕು.

ಶ್ರೀಎಸ್.ಬಂಗಾರಪ್ಪ:- ನೀವು ಅವರನ್ನು ಕರೆದು ಮಾತನಾಡುವ ವಿಚಾರದಲ್ಲಿ ಬೇರೆಯಾದ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದೀರಿ. ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ನೀವು ಅವರನ್ನು ಕರೆಸಿ ಮಾತನಾಡಿದರೆ ಏನೂ ಕಳೆದುಕೊಳ್ಳುವುದಿಲ್ಲ. ಮುಂದೆ ಅಮೆಂಡ್‌ಮೆಂಟ್ ಬರುತ್ತದೆ ಆಗ ಅದು ಚರ್ಚೆಗೆ ಬರುತ್ತದೆ ಎಂಬಿತ್ಯಾದಿಗಳನ್ನು ನೀವೇ ಹೇಳಿ ಸಮಾಧಾನ ಮಾಡಿಕಳುಹಿಸಿಕೊಡಿ. ನೀವು ಅದನ್ನು ಕೂಡ ಮಾಡುವುದಿಲ್ಲ ಅಂದರೆ ಹೇಗೆ? ಸರಕಾರದವರು ಈ ವಿಚಾರದಲ್ಲಿ ಸ್ವಲ್ಪ ಹಿಂದೆ ಮುಂದೆ ನೋಡಬೇಕಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಎಸ್.ಬಂಗಾರಪ್ಪ :- ಇಲ್ಲಿ ವಿಷಯದ ಸಾರ್ವಜನಿಕ ಮಹತ್ವವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇಲ್ಲವಾದರೆ ನಾವು ಕೂಡ ನಿಮ್ಮ ನೀತಿಯನ್ನು ಪ್ರತಿಭಟಿಸಲೇ

ಬೇಕಾಗುತ್ತದೆ. ನಾವು ಅವರನ್ನು ಕರೆದು ಮಾತನಾಡಿ ಎಂದು ಹೇಳಿದ್ದೇವೆ. ಟ್ಯಾಕ್ಸ್ ಹೆಚ್ಚು ಮಾಡಿದ್ದೀರಿ ಎಂದು ಹೇಳಿದ್ದೇವೆ. ಜಾಸ್ತಿ ಮಾಡುವುದು ಒಳ್ಳೆಯದಲ್ಲ ಎಂದು ನಾನು ಈಗಾಗಲೇ ವಿರೋಧ ಮಾಡಿದ್ದೇನೆ. ಈಗ ನೀವು ಸಂಬಂಧಪಟ್ಟವರನ್ನು ಕರೆದು ಮಾತನಾಡಿಸಿ ಎಂದರೂ ನೀವು ತಯಾರಾಗಿಲ್ಲದ ಕಾರಣ ಈ ನಿಮ್ಮ ನೀತಿಯನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡಬೇಕಾದ ಅನಿವಾರ್ಯತೆ ಬಂದಿದೆ. ಈ ನಿಮ್ಮ ನೀತಿಗಾಗಿ ನಾವು ವಿರೋಧಿಸಿ ಸಭಾತ್ಯಾಗವನ್ನು ಮಾಡುತ್ತೇವೆ. ಸಭಾ ಅಧ್ಯಕ್ಷರಿಗೆ ವಂದನೆಗಳು.

(ಕೆ.ಸಿ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು :- ಈಗ ಬಜೆಟ್ ಮೇಲಿನ ಚರ್ಚೆಯನ್ನು ಮುಂದುವರೆಸಿ. ಶ್ರೀ ಖಮರುಲ್ ಇಸ್ಲಾಂ ರವರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಈಗ ಸರಕಾರ ಮತ್ತು ಬಸ್ ಮಾಲೀಕರ ಮಧ್ಯದ ಜಗಳವು ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತಾಗಿದೆ. ಇಲ್ಲಿ ಖಾಸಗೀ ಬಸ್‌ನವರ ಪ್ರಶ್ನೆ ಅಲ್ಲ. ಇಲ್ಲಿರುವುದು ಪ್ರಯಾಣಿಕರ ಸಮಸ್ಯೆ ಮಾತ್ರ. ಅವರನ್ನು ಕರೆದು ಮಾತನಾಡುವ ಉದ್ದೇಶ ಜನರಿಗೆ ತೊಂದರೆಯಾಗಬಾರದು ಎನ್ನುವುದು. ಇದನ್ನು ಯಾರೂ ಕೂಡ ಪ್ರೆಸ್ಟೀಜ್ ಇಷ್ಯೂ ಆಗಿ ತೆಗೆದುಕೊಳ್ಳುವ ಕಾರಣವಿಲ್ಲ. ಇದರಲ್ಲಿ ಯಾವುದಕ್ಕೂ ಕಮಿಟ್ ಆಗುವ ಪ್ರಶ್ನೆಯೂ ಬರುವುದಿಲ್ಲ. ವಾಸ್ತವಿಕ ವಿಚಾರಗಳನ್ನು ಮಾತನಾಡಿ, ಬಜೆಟ್ ಬಗ್ಗೆ ಪೂರ್ಣ ವಿಚಾರಗಳನ್ನು ಅವರಿಗೆ ಹೇಳಿ, ಯಾವುದೇ ಷರತ್ತು ಇಲ್ಲದೇ ಗಂಭೀರವಾಗಿ ತಾವು ಯಾವ ರೀತಿಯಲ್ಲಿ ಬಸ್‌ಗಳನ್ನು ಓಡಿಸುತ್ತೀರೋ ಓಡಿಸಿ. ನಾವು ಆಲೋಚನೆ ಮಾಡಬೇಕಾದ ವಿಚಾರವನ್ನು ಸರಕಾರವು ಗಂಭೀರವಾಗಿ ತೆಗೆದುಕೊಂಡು ಪರ್ಯಾಲೋಚನೆ ಮಾಡುತ್ತೇವೆಂದು ಹೇಳಿದರೆ ಸಾಕು. ಇದರ ಬಗ್ಗೆ ತಾವು ಒಂದು ತೀರ್ಮಾನಕ್ಕೆ ಬರಬೇಕು. ಇದನ್ನು ಪ್ರೆಸ್ಟೀಜ್ ಇಷ್ಯೂ ಆಗಿ ತೆಗೆದುಕೊಳ್ಳಬಾರದು. ಇದರಲ್ಲಿ ನಿಮ್ಮ ಅವರ ವಾದದಿಂದಾಗಿ ಜನರಿಗೆ ತೊಂದರೆಯಾಗುತ್ತದೆ. ಜನರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಜವಾಬ್ದಾರಿಯು ಸರಕಾರದ್ದು. ಇಲ್ಲಿ ನಾನು ಅವರನ್ನು ಕರೆಯಿಸುವುದಿಲ್ಲ ಎಂಬ ವಿಚಾರ ಇಲ್ಲ. ಇದು ಪ್ರಯಾಣಿಕರ ಪ್ರಶ್ನೆ. ಮಕ್ಕಳಿಗೆ ಎಕ್ಸಾಮಿನೇಷನ್ ನಡೆಯುತ್ತಿರುವ ಕಾರಣ ಇದು ಬಹಳ ಗಂಭೀರವಾದ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗೀ ಬಸ್‌ಗಳು ಓಡಾಡುತ್ತಾ ಇಲ್ಲ. ಇದರಿಂದ ಜನರಿಗೆ ಬಹಳ ತೊಂದರೆಯಾಗಿ ಅನುಹುತವಾಗುವುದಕ್ಕಿಂತ ಮುಂಚೆ ಅವರನ್ನು ಕರೆಯಿಸಿ ಮಾತನಾಡುವ ಸೌಜನ್ಯವನ್ನು ತೋರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಬಿ.ಮುನಿಯಪ್ಪ (ಗಾಂಧಿನಗರ) :- ಅಧ್ಯಕ್ಷರೇ, ಸರ್ಕಾರ ಹೊಸ ತೆರಿಗೆ ಹಾಕಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಖಾಸಗಿ ಬಸ್ ಮಾಲೀಕರು ಬಸ್ಸನ್ನು ತಡೆದು ಸರ್ಕಾರದ ಗಮನ ಸೆಳೆದಿದ್ದಾರೆ. ಒಬ್ಬ ಸಚಿವರು ಇಲ್ಲಿ ಹೇಳಿದರು ಸರ್ಕಾರ ದೊಡ್ಡದೋ ಬಸ್ ಮಾಲೀಕರು ದೊಡ್ಡದೋ ಎಂದು. ಅರ್ಥ ಸಚಿವರು ಹೇಳಿದ ರೀತಿಯಲ್ಲಿ ಹೊಸ ತೆರಿಗೆಗಳನ್ನು ಹಾಕಿರುವ ಬಗ್ಗೆ ಈಗ ಚರ್ಚೆ ನಡೆದಿದೆ. ಸಂಬಂಧಪಟ್ಟವರೆಲ್ಲಾ ಈ ರೀತಿ ಮಾಡಿದರೆ ಇಡೀ ರಾಜ್ಯವೇ ಸಂಪೂರ್ಣ ಬಂದ್ ಆಗಿಬಿಡುತ್ತದೆ. ಅವರಿಗೆ ಸರ್ಕಾರ ಯೀಲ್ಡಾಗಿ ಅವರಿಗೆ ಹೆದರಿಕೊಂಡು ಅವರನ್ನು ಕರೆಯಿಸಿ ಮಾತನಾಡಬೇಕೆನ್ನುವ ವಾದ ನನ್ನದಲ್ಲ. ಆದರೆ ಇವತ್ತು ಇಡೀ ರಾಜ್ಯದಲ್ಲಿ ಏನು ನಡೆಯುತ್ತಿದೆ ಸಾರ್ವಜನಿಕರಿಗೆ ಅದರಲ್ಲೂ ಮಕ್ಕಳಿಗೆ ಅವರ ಶಿಕ್ಷಣಕ್ಕೆ ಕೊಡಗು ಜಿಲ್ಲೆ, ದಕ್ಷಿಣ ಕನ್ನಡ, ಶಿವಮೊಗ್ಗ, ಕಡೆಗಳಲ್ಲೆಲ್ಲಾ ಇದರ ಬಗ್ಗೆ ಗಮನ ಹರಿಸಬೇಕು. ಆದರೆ ಅದಕ್ಕೋಸ್ಕರ ಸರ್ಕಾರ ಅವರ ಕಾಲಿಗೆ ಬೀಳಲಿ ಎಂದು ನಾನು ಖಂಡಿತ ಹೇಳುತ್ತಿಲ್ಲ. ಆದರೆ ಅವರ ಸಮಸ್ಯೆಯೇನು ಎಂದು ಅವರನ್ನು ಕರೆದು ಕೇಳುವಂತಹ ಸೌಜನ್ಯ ತೋರಿಸಿದರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ. ಸಾರ್ವಜನಿಕರಿಗೂ ಒಳ್ಳೆಯದಾಗುತ್ತದೆ. ನಾಳೆ ಇನ್ನೊಬ್ಬರು, ಗೋಧಿ ಹಿಟ್ಟು ಮಾರುವವರೂ ಬರಬಹುದು. ಅದು ಅವರ ಸಮಸ್ಯೆ; ತಪ್ಪಲ್ಲ. ಆದರೆ ಅವರೂ ಕೂಡ ಸರ್ಕಾರ ಏನಾದರೂ ಹೊಸ ತೆರಿಗೆ ಹಾಕಿದಾಗ ತಕ್ಷಣವೇ ಜಾರಿಗೆ ಬರುವುದಿಲ್ಲ. ಅವರ ಸಂಘಗಳಿವೆ, ಪದಾಧಿಕಾರಿಗಳಿರುತ್ತಾರೆ ಸರ್ಕಾರದ ಗಮನಕ್ಕೆ ತಂದು 4 ದಿವಸವೋ ವಾರಾನೋ ಅವಕಾಶ ಕೊಡುತ್ತೇವೆ, ವಾಪಸ್ ತೆಗೆಯಲಿಲ್ಲ ಎಂದರೆ ನಾವು ಈ ತರಹ ನಿಲ್ಲಿಸುತ್ತೇವೆ ಎಂದು ಹೇಳಿಕೆ ಕೊಡಬಹುದಾಗಿತ್ತು. ಸರ್ಕಾರಕ್ಕೆ ಈ ರೀತಿ ಇನ್‌ಡೈರೆಕ್ಟಾಗಿ ಥ್ರೆಟನ್ ಮಾಡುವ ರೀತಿ ಇದ್ದರೂ ಸಹ, ನನಗೆ ಬಸ್ ಮಾಲೀಕರ ವಿಚಾರಕ್ಕಿಂತ ಹೆಚ್ಚಾಗಿ ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಅನುಕೂಲದ ದೃಷ್ಟಿಯಿಂದ ಸರ್ಕಾರ ಯಾವುದಾದರೂ ಸೂತ್ರ ಕಂಡು ಹಿಡಿಯಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೆಪಲ್ಲಿ) :- ಅಧ್ಯಕ್ಷರೇ, ಖಾಸಗೀ ಮಾಲೀಕರ ಪ್ರಶ್ನೆ ಅಂಥ ಮುಖ್ಯವಾಗಿಲ್ಲ. ಸರ್ಕಾರ ಒಂದು ಆಲೋಚನೆ ಮಾಡಬೇಕಾಗಿದೆ. ಮುಷ್ಕರ ಮಾಡುವ ಮೂಲಕ ಅವರು ಸರ್ಕಾರಕ್ಕೆ ಬೆದರಿಕೆ ಹಾಕಿದ್ದಾರೆ ಎಂದು ತೆಗೆದುಕೊಳ್ಳಬಾರದು. ಮುಷ್ಕರ ಮಾಡುವುದು ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರ ಹಕ್ಕಿದೆ. ಸಿದ್ಧರಾಮಯ್ಯನವರೂ ಕೂಡ ನಮ್ಮ ಜೊತೆಯಲ್ಲೇ ಹಲವಾರು ಮುಷ್ಕರ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದಾರೆ. ಆದರೆ ಮುಷ್ಕರ ಹೂಡಿದ ತಕ್ಷಣವೇ ಅವರೇನೋ ಸರ್ಕಾರಕ್ಕೆ ಬೆದರಿಕೆ ಹಾಕಿಬಿಟ್ಟಿದ್ದಾರೆ. ಮುಷ್ಕರ ನಿರತರನ್ನು ಕರೆದು ಮಾತನಾಡಿದರೆ ನಮಗೆ ಪ್ರೆಸ್ಟೀಜ್ ಕಡಿಮೆಯಾಗುತ್ತದೆ ಎಂಬ ದೃಷ್ಟಿಯಲ್ಲಿ ಆಲೋಚನೆ ಮಾಡುವುದಾದರೆ ನಾನೂ ಕೂಡ ವಿರೋಧ ಮಾಡುತ್ತೇನೆ. ಆದರೆ ಟ್ಯಾಕ್ಸ್ ಹಾಕಿದ ತಕ್ಷಣ ಅವರು ಬೆದರಿಕೆ ಹಾಕಿದಾಗ ಸರ್ಕಾರ ಮಣಿಯಬೇಕು ಎಂದು ನಾವೇನೂ ಹೇಳುತ್ತಿಲ್ಲ. ನಾವೀಗ

ಆಲೋಚನೆ ಮಾಡಬೇಕಾಗಿರುವುದು ಎರಡು ದೃಷ್ಟಿಯಲ್ಲಿ. ಒಂದು, ಮುಷ್ಕರ ಹೂಡುವ ಹಕ್ಕನ್ನು ಯಾವುದೇ ಸರ್ಕಾರ ಆಗಲೇ ಒಪ್ಪಬೇಕು. ಆದ್ದರಿಂದ ಇವತ್ತು ಬಸ್ ಮಾಲೀಕರು ಮುಷ್ಕರ ಮಾಡುವ ಮೂಲಕ ಅವರು ಬೆದರಿಕೆ ಹಾಕುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ನಾಳೆ ದಿವಸ ನಿಜವಾಗಿಯೂ ಏನಾದರೂ ಸಮಸ್ಯೆ ಇರುವ ಗುಂಪು ಮುಷ್ಕರ ಹಾಕಿದಾಗ ಸರ್ಕಾರ ಆಗಲೂ ಅವರ ಜೊತೆ ಮಾತುಕತೆ ಆಗುವುದಿಲ್ಲ ಎಂಬ ಪರಿಪಾಠ ಆಗಬಹುದು. ಆದ್ದರಿಂದ ದಯವಿಟ್ಟು ಆ ಪ್ರಶ್ನೆ ಬಿಟ್ಟು ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಇವರು ಖಾಸಗೀ ಬಸ್‌ಗಳನ್ನು ಓಡಾಡಲಿಕ್ಕೆ ಬಿಟ್ಟಿದ್ದಾರೆ. ಓಡಾಡಲಿಕ್ಕೆ ಇವರು ಬಿಡದೆ ಇದ್ದರೆ ಪ್ರಶ್ನೆ ಬೇರೆ. ಖಾಸಗಿ ಬಸ್‌ನವರು ಮುಷ್ಕರ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಸಂದರ್ಭ ಬಂದಾಗ ನೀವು ಮಾಲೀಕರ ದೃಷ್ಟಿಯಿಂದ ಮಾತನಾಡಬೇಡಿ. ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳು ಅನುಭವಿಸುವ ಕಷ್ಟ ಸುಖಗಳ ದೃಷ್ಟಿಯಿಂದ ನೀವು ಆ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಸರ್ಕಾರ ನಮಗೆ ಪ್ರೆಸ್ಟೀಜ್ ಕಡಿಮೆಯಾಗುತ್ತದೆ ನಾವಾಗಿ ಕರೆದರೆ ಎಂದು ಹೇಳುವ ಬದಲು ಬೇರೆ ಬೇರೆ ವಿಧಾನಗಳಿವೆ ಅವರನ್ನು ಕರೆಯಿಸಿ ಮಾತನಾಡಲಿಕ್ಕೆ. ನೀವೇ ನೇರವಾಗಿ ಕರೆಯುವ ಅವಶ್ಯಕತೆ ಇಲ್ಲ, ಹಾಗೆ ಕರೆಯಿಸಿ ಮಾತನಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇಲ್ಲದೇ ಹೋದರೆ ಅದಕ್ಕೆ ಅಂತ್ಯ ಎಲ್ಲಿ ಆಗುತ್ತದೆ? ನೀವು ಕರೆಯುವುದಿಲ್ಲ ಬಿಡಿ, ನಾಳೆ, ನಾಡಿದ್ದು ಒಂದು ವಾರಾನೂ ಆದರ ಪರಿಹಾರಕ್ಕೆ ನೀವು ಹುಡುಕಬಹುದು. ಆದರೆ ನೀವು ಸಾರ್ವಜನಿಕರಿಗೆ ತೊಂದರೆಯಾಗಿಲ್ಲ ಎಂದು ಹೇಳುತ್ತೀರಿ. ನೀವು ಪರಿಹಾರ ಏನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ ಖಂಡಿತ ಅದರಿಂದ ಪ್ರಯೋಜನವಾಗುವುದಿಲ್ಲ. ಏಕೆಂದರೆ ಇವರು ಮಾತಾಪಲಿ ಮಾಡಿರುವ ಜಿಲ್ಲೆಗಳಲ್ಲೇ ಸರ್ಕಾರಿ ಬಸ್ ಹಾಕಿರುವ ಕಡೆ ಜನಕ್ಕೆ ವಿಪರೀತ ತೊಂದರೆಯಾಗಿದೆ, ಇನ್ನು ಅದರಂತೆ ಪರ್ಯಾಯ ವ್ಯವಸ್ಥೆ ನಾವು ಮಾಡದೇ ಇದ್ದರೆ ಖಂಡಿತ ಸಮಸ್ಯೆ ಪರಿಹಾರವಾಗುವುದಿಲ್ಲ. ಸಮಸ್ಯೆ ಪರಿಹಾರವಾಗಬೇಕಾದರೆ ಅದಕ್ಕೇನಾದರೂ ಒಂದು ಮಾರ್ಗ ಸರ್ಕಾರ ಕಂಡು ಹಿಡಿಯಬೇಕು. ಇಲ್ಲ, ಬೇರೆ ರೀತಿಯಿಂದಲಾದರೂ ನಾವು ಇದಕ್ಕೆ ಪರಿಹಾರ ಹುಡುಕುತ್ತೇವೆ ಎಂದು ಹೇಳಿಲಿ. ಆದ್ದರಿಂದ ಅವರನ್ನು ಮಾತುಕತೆಗೆ ಕರೆಯಿಸಿ ಒಂದು ಪರಿಹಾರ ಹುಡುಕಿ, ಇದರಲ್ಲಿ ಪ್ರೆಸ್ಟೀಜ್ ಪ್ರಶ್ನೆ ಬೇಡ.

ಶ್ರೀ ಕೆ.ಎನ್.ನಾಗೇಗೌಡ :-ನಮ್ಮ ಉಪಾಧ್ಯಕ್ಷರಿಗೆ ಒಂದು ಸಲಹೆ ಕೊಡಬಯಸುತ್ತೇನೆ. ನಾವು ರೂಲ್ಸನ್ನು ಉಲ್ಲಘಿಸುವುದಕ್ಕೆ ಆಗುವುದಿಲ್ಲ. ನಾನೂ ಕೂಡ ಮೇಲ್ಮನೆಯಲ್ಲಿ 12 ವರ್ಷ ಕೆಲಸ ಮಾಡಿದ್ದೇನೆ. ಚರ್ಚೆ ನಡೆಯುವ ಸಂದರ್ಭದಲ್ಲಿ ಇಮ್ಮಿಡಿಯೇಟಾಗಿ ಶೂನ್ಯ ವೇಳೆ ತರಹ ಮಹತ್ವದ ವಿಚಾರ ಇರಬಹುದು ಇಲ್ಲದೇ ಇರಬಹುದು ಅದಕ್ಕೆ ಚರ್ಚೆಗೆ ಅವಕಾಶ ಕೊಟ್ಟು ಸಚಿವರು ಸ್ಟೇಟ್‌ಮೆಂಟ್ ಮಾಡಿದ

ಮೇಲೆ ಅವಕಾಶ ಕೊಟ್ಟರೆ ಖಂಡಿತವಾಗಿ ನಾವು ಈ ಸದನದ ನಿಯಮಾವಳಿಗಳನ್ನು ಗಾಳಿಗೆ ತೂರಿದಂತಾಗುತ್ತದೆ. ನಮ್ಮಂಥ ಸದಸ್ಯರು ಈ ನಿಯಮಾವಳಿಗಳನ್ನು ಮೀರಿ ಮಾತನಾಡುವುದಕ್ಕೆ ಆಗುವುದಿಲ್ಲ. ಎರಡನೆಯದು, ತಾವು ಚರ್ಚೆಗೆ ಅವಕಾಶ ಕೊಟ್ಟು ಬಿಟ್ಟಿದ್ದೀರಿ.

ಉಪಾಧ್ಯಕ್ಷರು :- ಚರ್ಚೆಗಲ್ಲ, ಕ್ಲಾರಿಫಿಕೇಷನ್‌ಗೆ.

ಶ್ರೀ ಕೆ.ಎನ್.ನಾಗೇಗೌಡ :- ಸಾರ್ ಕ್ಲಾರಿಫಿಕೇಷನ್ ಅರ್ಥ ಏನೆಂದರೆ ಒಂದು ಸೆಂಟೆನ್ಸ್. ನಾನು ಒಂದೇ ಒಂದು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಈ ಬಸ್ ಮಾಲೀಕರು ಸರ್ಕಾರಕ್ಕೆ ತಿಳಿಸದೇ ಮುಷ್ಕರ ಮಾಡಿದ್ದಾರೆ, ಸರ್ಕಾರ ಅದಕ್ಕೆ ಬಗ್ಗಕೂಡದು. ಏತಕ್ಕೆಂದರೆ ಆಮೇಲೆ ಕಷ್ಟವಾಗುತ್ತದೆ. ಸದನದಲ್ಲಿ ನಾವು ತೆರಿಗೆ ಮೇಲೆ ಚರ್ಚೆ ಮಾಡುವ ಕಾಲದಲ್ಲಿ ನಾವಿನ್ನೂ ಇದನ್ನು ಚರ್ಚೆ ಸಂಪೂರ್ಣ ಮಾಡಿ ಪಾಸ್ ಮಾಡಿಲ್ಲ. ಆ ಮಧ್ಯೆದಲ್ಲಿ ಸರ್ಕಾರಕ್ಕೆ ಬೆದರಿಕೆ ಹಾಕುವಂತಹ ಕ್ರಮ ಏನು ಮಾಡಿದ್ದಾರೆ ಬಸ್ ಮಾಲೀಕರು, ಇದಕ್ಕೆ ಸರ್ಕಾರ ಮಣಿಯಕೂಡದು. ಎರಡನೆಯದು, ಎಲ್ಲೆಲ್ಲಿ ರಾಷ್ಟ್ರೀಕರಣ ಸಾಧ್ಯವೋ ಅಲ್ಲೆಲ್ಲಾ ರಾಷ್ಟ್ರೀಕರಣ ಮಾಡಬೇಕು. ಉದಾಹರಣೆಗೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಮೂರು ತಾಲ್ಲೂಕು ರಾಷ್ಟ್ರೀಕರಣವಾಗಿದೆ. ಇನ್ನೂ ಮೂರು ತಾಲ್ಲೂಕಿನಲ್ಲಿ ಇಲ್ಲ. ನೀವು ಉಳಿದ ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಬೇಕು. ಈಗೇನು ಎಕ್ಸ್‌ಟ್ರಾ 1000 ಬಸ್ ಬಿಟ್ಟಿದ್ದೀರಿ, ಇನ್ನೂ ಹೆಚ್ಚು ಬಸ್‌ಗಳನ್ನು ಶೀಘ್ರದಲ್ಲೇ ತರಿಸಿ. ಇದಕ್ಕೆ ಕಾರಣ ಹೇಳುವುದಾದರೆ ಒಂದು ಪರ್ಮಿಟ್ ತೆಗೆದುಕೊಂಡು ಒಂದು ರೂಟ್‌ನಲ್ಲಿ ಓಡಿಸುತ್ತಿಲ್ಲ ಅವರು. ಕೆ.ಎಸ್.ಆರ್.ಟಿ.ಸಿ. ನಷ್ಟ ಆಗಬೇಕಾದರೆ ಖಾಸಗಿ ಬಸ್‌ನವರು ಕಾರಣ. ನ್ಯಾಷನಲ್ ಸ್ಟೇಟ್ ಹೈವೇಗಳಲ್ಲಿ ಪರ್ಮಿಟ್ ಇಲ್ಲದೇ ಕದ್ದು ಪೋಲೀಸರು ಇವರು ಸಾರಿಗೆ ಇಲಾಖೆಯವರು ಮೂರು ಜನ ಸೇರಿಕೊಂಡು ಬಸ್‌ಗಳನ್ನು ಓಡಿಸುತ್ತಿದ್ದಾರೆ. ಎರಡನೆಯದು ಜಾಲಪ್ಪನವರು ಹೇಳಿದಂತೆ 50 ಸೀಟಿದ್ದರೆ 100 ಸೀಟ್ ಹಾಕಿಕೊಂಡು ಓಡಿಸುತ್ತಾರೆ. ರಾಷ್ಟ್ರೀಕರಣವನ್ನು ಸಂಪೂರ್ಣವಾಗಿ ರಾಜ್ಯದಲ್ಲಿ ನೀವು ಜಾರಿಗೆ ತರಬೇಕು. ಯಾವ್ಯಾವ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಇಲ್ಲ ಅಲ್ಲೆಲ್ಲಾ ರಾಷ್ಟ್ರೀಕರಣ ಮಾಡಬೇಕು. ದೇವರಾಜ ಅರಸರ ಕಾಲದಲ್ಲಿ ಯಾವ ರೀತಿ ಖಾಸಗೀ ಬಸ್‌ಗಳನ್ನು ಆಕ್ಟ್ಯೂರ್ ಮಾಡಿಕೊಂಡಿದ್ದರೋ ಆ ರೀತಿ ಈಗಲೂ ಮಾಡಿ ಹೊಸ ಆಕ್ಟ್ ತಂದು ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ರಾಷ್ಟ್ರೀಕರಣ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ :- ನಾಗೇಗೌಡರು ಹೇಳುವುದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಇಡೀ ರಾಜ್ಯದಲ್ಲಿ ರಾಷ್ಟ್ರೀಕರಣ ಮಾಡಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು.

ಉಪಾಧ್ಯಕ್ಷರು :- ಈ ವಿಷಯದ ಮೇಲಿನ ಚರ್ಚೆ ಇಲ್ಲಿಗೆ ಮುಗಿಯಿತು. ಸರ್ಕಾರ ಈಗಾಗಲೇ ಉತ್ತರಿಸಿದ್ದಾರೆ. ಇನ್ನು ಆಯವ್ಯಯದ ಮೇಲಿನ ಚರ್ಚೆ ಮುಂದುವರೆಯುವುದು.

SRI QAMARUL ISLAM (Gulbarga) :- Mr. Deputy Speaker, the Hon'ble Finance Minister has presented the budget for 1995-96 on 23-3-1995. In his speech, he has said that the main feature of the budget is to help the poor people of the State. But, actually it is not so. I have gone through the speech. In my opinion, this budget is anti-poor, this budget is not progressive, this budget has not covered any new area for the upliftment of the poor. I will now go into detail. This budget, in my opinion, has not done any justice to the backward regions of Karnataka; Hyderabad-Karnataka area, Malnad area and also the border district areas. This budget discriminates between the urban poor and the rural poor. This budget also discriminates the people of the urban area living in and around Bangalore and also the people of the urban areas of other parts of the State. This budget has not declared any new policy for the overall uplift of the minorities. This budget has imposed a tax of Rs.244 crores, which is a record. Sir, when I say this budget as anti-poor, we all know that we are rice-eaters or wheat-eaters. Once this Government has reduced the rate of rice to Rs.3.20 a kg. to the green card holders, at the same time, the people who are wheat- eaters, should also be given the same concession. Wheat cannot be consumed directly. It has to be converted to Atta, soji and then it has to be consumed. Here, 4% tax has been imposed on the wheat products like Atta, Maida as well as soji. They are food of the common man. If you go to a